ವಿಜಯಪುರ | ಸಂಪುಟ 02 | ಸಂಚಿಕೆ 236 | ಪುಟ 4 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಬುಧವಾರ, ನವೆಂಬರ್ 13, 2024

"ಭಾಷೆಗಳು ಕೇವಲ ಮಾತನಾಡುವ ಮಾಧ್ಯಮ ಮಾತ್ರವಲ್ಲದೆ ನಮ್ಮ ಸಂಸ್ಕೃತಿಯ ಪ್ರತಿಬಿಂಬವಾಗಿರುತ್ತವೆ. ಕನ್ನಡ ಕೇವಲ ಭಾಷೆ ಮಾತ್ರವಾಗಿರದೆ ನಮ್ಮ ಜೀವನಾಡಿಯಾಗಿದೆ. ಭಾಷೆ ನಾಶವಾದರೆ ಒಂದು ಪರಂಪರೆಯೇ ನಾಶವಾದಂತೆ. ಕಾರಣ ಅದನ್ನು ಉಳಿಸಿ ಬೆಳೆಸಬೇಕು."



■ ಬಸವರಾಜ ಕೌಲಗಿ
ಸಂಸ್ಥಾಪಕ ಅಧ್ಯಕ್ಷರು, ಎಕ್ಸಲಂಟ್ ಸಮೂಹ ಶಿಕ್ಷಣ ಸಂಸ್ಥೆ

## ಉತ್ತಮ ರೀತಿಯಲ್ಲಿ ಕಾಮಗಾರಿಗಳ ಅನುಷ್ಠಾನ: ಕೇಂದ್ರ ತಂಡದ ಪ್ರಶಂಸೆ



### ಜಿಲ್ಲೆಗೆ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ ತಂಡ ಭೇಟಿ | ಜಿಪಂ ಸಿಇಒ ಅವರ ನೇತೃತ್ವದಲ್ಲಿ ಸಭೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕೇಂದ್ರ ಎನ್‌ಎಲ್‌ಎಂ ( ನ್ಯಾಷನಲ್ ಲೆವೆಲ್ ಇನಸ್ಟಿಟ್ಯೂಷನಲ್ ಮಾನಿಟರ್) ಗಾಂಧಿ ಗ್ರಾಮ ರೂರಲ್ ಇನ್ಸಿಟ್ಯೂಟ್ ತಮಿಳುನಾಡು ಅಧಿಕಾರಿಗಳಾದ ಡಾ.ಎ.ಆರ್.ಮಣಿ ಹಾಗೂ ಇ.ಆರ್. ಕೆರೋಸಿವ್ ಇವರೊಂದಿಗೆಮುಖ್ಯಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ಜಿಲ್ಲಾ ಪಂಚಾಯತಿಯಲ್ಲಿ ಸಭೆ ನಡೆಯಿತು.

ಸಭೆಯಲ್ಲಿ ಮಾತನಾಡಿದ ಅಧಿಕಾರಿಗಳು, ಗ್ರಾಮ ಪಂಚಾಯಿತಿಗಳಲ್ಲಿ ಸಮೀಕ್ಷೆ ಕೈಗೊಂಡ ಕ್ರೋಢೀಕೃತ ಸಂಪೂರ್ಣ ಮಾಹಿತಿಯ ಪ್ರಕಾರ ಕೇಂದ್ರ ಪ್ರಾಯೋಜಕತ್ವದ ಯೋಜನೆಗಳ ಅನುಷ್ಠಾನದ ಕುರಿತು ತಮ್ಮ ವರದಿಯಲ್ಲಿ ನಮೂದಿಸಿಕೊಂಡ ವಿಷಯದ ಕುರಿತು ಸಭೆಯಲ್ಲಿ ಪ್ರಸ್ತಾಪಿಸಿದರು.

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನಗೊಂಡ ಸರ್ಕಾರಿ ಶಾಲಾ ಅಭಿವೃದ್ಧಿ ಕಾಮಗಾರಿಗಳು, ಬೋರ್‌ವೆಲ್ ಮರುಪೂರಣ ಘಟಕ, ಅಮೃತ ಸರೋವರ, ಎನ್.ಆರ್.ಎಲ್.ಎಮ್ ಯೋಜನೆ, ಪಿಂಚಣಿ ಯೋಜನೆಗಳು, ವಸತಿ ಯೋಜನೆ ಕಾಮಗಾರಿಗಳು, ಸಾಮಾಜಿಕ ಅರಣ್ಯೀಕರಣ ಕಾಮಗಾರಿಗಳು ಜಿಲ್ಲೆಯಲ್ಲಿ ಉತ್ತಮ ರೀತಿಯಲ್ಲಿ ಅನುಷ್ಠಾನಗೊಂಡಿವೆ ಎಂದರು.

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನಗೊಂಡ ಕಾಮಗಾರಿಗಳಾದ ಸರ್ಕಾರಿ ಶಾಲಾ ಅಭಿವೃದ್ಧಿ ಕಾಮಗಾರಿಗಳು, ಜಲ ಸಂರಕ್ಷಣೆ ಕಾಮಗಾರಿಗಳಾದ ಬೋರ್ ವೆಲ್ ಮರುಪೂರಣ ಘಟಕ, ಅಮೃತ ಸರೋವರ ಕಾಮಗಾರಿಗಳನ್ನು ವೀಕ್ಷಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಯೋಜನಾಧಿಕಾರಿ ನಿಂಗಪ್ಪ ಗೋಠೆ, ಡಿ.ಆರ್.ಡಿ.ಎ ಕೋಶದ ಯೋಜನಾ ನಿರ್ದೇಶಕ ಬಿ. ಎಸ್. ರಾಠೋಡ ಸೇರಿದಂತೆ ಜಿಲ್ಲೆಯ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಜಿಲ್ಲಾ ಪಂಚಾಯತಿಯ ಅಧಿಕಾರಿ, ಸಿಬ್ಬಂದಿ ಉಪಸ್ಥಿತರಿದ್ದರು.

**ವಿವಿಧ ಗ್ರಾಪಂಗಳಿಗೆ ಭೇಟಿ ಮತ್ತು ಸಮೀಕ್ಷೆ**

ಗಾಂಧಿ ಗ್ರಾಮ ರೂರಲ್ ಇನ್‌ಸ್ಟಿಟ್ಯೂಟ್ ತಮಿಳುನಾಡು ಅಧಿಕಾರಿಗಳಾದ ಡಾ.ಎ.ಆರ್.ಮಣಿ ಹಾಗೂ ಇ.ಆರ್. ಕೆ ರೋಸಿವ್ ಅವರು ನ.7 ರಿಂದ ನ.11 ವರೆಗೆ ವಿಜಯಪುರ ಜಿಲ್ಲೆಯ ಚಡಚಣ, ಬಸವನ ಬಾಗೇವಾಡಿ, ಇಂಡಿ ಹಾಗೂ ದೇವರ ಹಿಪ್ಪರಗಿ ತಾಲೂಕುಗಳಲ್ಲಿನ ಆಯ್ದ ವಿವಿಧ ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ, ಸಮೀಕ್ಷೆ ಕೈಗೊಂಡು ಸಂಬಂಧಿಸಿದ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಹಾಗೂ ಅರ್ಹ ಫಲಾನುಭವಿಗಳೊಂದಿಗೆ ಚರ್ಚಿಸಿ, ಗ್ರಾಮೀಣ ಭಾಗದಲ್ಲಿ ಅನುಷ್ಠಾನಗೊಳಿಸಲಾದ ಮಹಾತ್ಮಗಾಂಧಿ ನರೇಗಾ ಯೋಜನೆ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ, ಪ್ರಧಾನ ಮಂತ್ರಿ ಆವಾಸ್ ಯೋಜನೆ ಗ್ರಾಮೀಣ ನ್ಯಾಷನಲ್ ಸೋಶಿಯಲ್ ಅಸಿಸ್ಟನ್ಸ್ ಪ್ರೊಗ್ರಾಮ್, ರುಡ್‌ಸೆಟ್, ಸ್ವಾಮಿತ್ವ ಯೋಜನೆಗಳು ಹಾಗೂ ಕಾಮಗಾರಿಗಳ ಪರಿಶೀಲನೆ ನಡೆಸಿದರು.

# ಎಚ್.ಡಿ.ಕುಮಾರಸ್ವಾಮಿಗೆ ಜಮೀರ್ ಅಹ್ಮದ್ ಕ್ಷಮೆಯಾಚನೆ



### ಕೇಂದ್ರ ಸಚಿವ ಕುಮಾರಸ್ವಾಮಿಗೆ 'ಕರಿಯಾ' ಎಂದಿದ್ದಕ್ಕೆ ಕ್ಷಮೆ | ಸಚಿವ ಜಮೀರ್ ವಜಾಗೆ ಜೆಡಿ(ಎಸ್) & ಬಿಜೆಪಿ ಒತ್ತಾಯ

ಮೈಸೂರು: ಕೇಂದ್ರ ಸಚಿವ ಮತ್ತು ಜೆಡಿಎಸ್ ನಾಯಕ ಎಚ್ ಡಿ ಕುಮಾರಸ್ವಾಮಿ ಅವರನ್ನು 'ಕಾಲಿಯಾ' ಎಂದು ಕರೆದಿದ್ದ ಸಚಿವ ಬಿ ಝಡ್ ಜಮೀರ್ ಅಹ್ಮದ್ ಖಾನ್ ಅವರು ಮಂಗಳವಾರ ತಮ್ಮ ಹೇಳಿಕೆಗೆ ಕ್ಷಮೆಯಾಚಿಸಿದ್ದಾರೆ.

ಜಮೀರ್ ಅಹ್ಮದ್ ಖಾನ್ ಅವರ ಕಾಲಿಯಾ ಹೇಳಿಕೆಯನ್ನು ಎನ್‌ಡಿಎ "ಜನಾಂಗೀಯ" ನಿಂದನೆ ಎಂದು ಟೀಕಿಸಿತ್ತು.

ವಸತಿ ಮತ್ತು ವಕ್ಫ್ ಸಚಿವರು ಜಮೀರ್ ಅಹ್ಮದ್ ಖಾನ್ ಅವರು ಈ ಹಿಂದೆ ಎಚ(ಖ)ನಲ್ಲಿದ್ದರು ಮತ್ತು ಆ ಸಮಯದಲ್ಲಿ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದ ಕುಮಾರಸ್ವಾಮಿಯವರಿಗೆ ಅತ್ಯಂತ ಆಪ್ತರಾಗಿದ್ದರು. ನನ್ನ ಹೇಳಿಕೆಯಿಂದ ಜೆಡಿಎಸ್ ಕಾರ್ಯಕರ್ತರಿಗೆ ನೋವಾಗಿದ್ದರೆ ನಾನು ಕ್ಷಮೆಯಾಚಿಸುತ್ತೇನೆ" ಎಂದು ಜಮೀರ್ ಅಹ್ಮದ್ ಖಾನ್ ಹೇಳಿದ್ದಾರೆ.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೊದಲಿನಿಂದಲೂ ಪ್ರೀತಿಯಿಂದ ಹಾಗೆ ಕರೆಯುತ್ತಿದ್ದೆ. ಅವರು ಕುಳ್ಳ ಎಂದು ಕರೆಯುತ್ತಿದ್ದರು. ನಾನು ಕರಿಯಣ್ಣ ಎಂದು ಕರೆಯುತ್ತಿದ್ದೆ ಎಂದು ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಚನ್ನಪಟ್ಟಣ ವಿಧಾನಸಭಾ ಉಪಚುನಾವಣೆಯ ಮೇಲೆ ಅವರ ಹೇಳಿಕೆ ಪ್ರಭಾವ ಬೀರಲಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಖಾನ್, "ಅದು ಏಕೆ ಪರಿಣಾಮ ಬೀರುತ್ತದೆ? ನಾನು ಮೊದಲ ಬಾರಿಗೆ ಹಾಗೆ ಕರೆದಿಲ್ಲ. ಕುಮಾರಸ್ವಾಮಿ ಮತ್ತು ನಾನು ಆಪ್ತರಾಗಿದ್ದಾಗ ಅವರು ನನ್ನನ್ನು 'ಕುಳ್ಳ' ಎಂದು ಕರೆಯುತ್ತಿದ್ದರು ಎಂದರು.

"ಜನಾಂಗೀಯ ನಿಂದನೆ" ಗಾಗಿ ಸಚಿವ ಜಮೀರ್ ಅಹ್ಮದ್ ಖಾನ್‌ಅವರನ್ನುಸಚಿವಸಂಪುಟದಿಂದವಜಾಗೊಳಿಸಬೇಕೆಂದು ಜೆಡಿ(ಎಸ್) ಮತ್ತು ಬಿಜೆಪಿ ಒತ್ತಾಯಿಸಿದ್ದವು.

### ಜಮೀರ್ ಹೇಳಿಕೆ ಖಂಡಿಸಿದ ಕಾಂಗ್ರೆಸ್ ಶಾಸಕ



ಮಂಡ್ಯ: ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ಅವರನ್ನು ಕರಿಯಾ ಎಂದು ಕರೆದಿದ್ದ ಸಚಿವ ಜಮೀರ್ ಅಹ್ಮದ್ ಖಾನ್ ವಿರುದ್ಧ ಸ್ವಪಕ್ಷದಲ್ಲೇ ಆಕ್ರೋಶ ವ್ಯಕ್ತವಾಗಿದೆ. ಎಚ್ ಡಿ ಕುಮಾರಸ್ವಾಮಿ ಬಗ್ಗೆ ಮಾತನಾಡುವಾಗ ನಾಲಿಗೆ ಮೇಲೆ ಹಿಡಿತ ಇರಲಿ ಎಂದು ಕಾಂಗ್ರೆಸ್ ಶಾಸಕ ಗಣಿಗ ರವಿಕುಮಾರ್ ಹೇಳಿದ್ದಾರೆ.

ಹೆಚ್‌ಡಿ ಕುಮಾರಸ್ವಾಮಿ ವಿರುದ್ಧ ಮಾತಿನ ಭರದಲ್ಲಿ ಸಚಿವ ಜಮೀರ್ ಅಹ್ಮದ್ ಖಾನ್, ಕುಮಾರಸ್ವಾಮಿ ಅವರ ಬಣ್ಣದ ಬಗ್ಗೆ ಮಾತನಾಡಿದ್ದು ಇದು ರಾಷ್ಟ್ರಮಟ್ಟದಲ್ಲಿ ವಿವಾದ ಹುಟ್ಟುಹಾಕಿದೆ. ಹೆಚ್‌ಡಿ ಕುಮಾರಸ್ವಾಮಿಯವರನ್ನು ಕರಿಯ ಎಂದು ಕರೆಯುವ ಮೂಲಕ ಜಮೀರ್ ಸಂಕಷ್ಟಕ್ಕೆ ಸಿಲುಕಿದ್ದಾರೆ. ಜಮೀರ್ ಹೇಳಿಕೆ ಕುರಿತಂತೆ ಪ್ರತಿಕ್ರಿಯಿಸಿದ ಶಾಸಕ ಗಣಿಗ ರವಿಕುಮಾರ್ ಜಮೀರ್ ಈ ರೀತಿ ಹೇಳಿರುವುದು ಅವರ ಘನತೆಗೆ ಶೋಭೆ ತರಲ್ಲ ಎಂದು ಕಿಡಿಕಾರಿದರು.

## ಹೈನುಗಾರಿಕೆಯಿಂದ ಕೃಷಿಯಲ್ಲಿ ಸಾಧನೆ ಸಾಧ್ಯ :ಶಾಸಕ ಮನಗೂಳಿ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ತಾಲೂಕಿನ ಜನತೆಗೆ ಒಳ್ಳೆಯದಾಗಲಿ, ಸರಕಾರದ ಯೋಜನೆಗಳನ್ನು ರೈತರು ಸದುಪಯೋಗ ಮಾಡಿಕೊಳ್ಳಲಿ ಎಂಬ ಉದ್ದೇಶದಿಂದ ಇಂತಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ಪಟ್ಟಣದ ಸಹಾಯಕ ಕೃಷಿ ನಿರ್ದೇಶಕರ ಕಾರ್ಯಾಲಯದಲ್ಲಿ ವಿಜಯಪುರ ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ ಹಾಗೂ ಸಿಂದಗಿ ಕೃಷಿ ಇಲಾಖೆಯ ಸಹಯೋಗದಲ್ಲಿ 2024-25ನೆಯ ಸಾಲಿನ ಜಲಾನಯನ ಅಭಿವೃದ್ಧಿ ಇಲಾಖೆಯ ಆರ್.ಡಿ.ಎ-ಆರ್. ಕೆ.ವಿ.ವಾಯ್-ಆರ್.ಎ.ಎಫ್.ಟಿ.ಎ.ಎ.ಆರ್ ಯೋಜನೆಯಡಿಯಲ್ಲಿ ಹಸು ವಿತರಣಾ ಕಾರ್ಯಕ್ರಮದಲ್ಲಿ ಆಯ್ಕೆಯಾದ ಪಲಾನುಭವಿಗಳಿಗೆ ಹಮ್ಮಿಕೊಂಡ ಮಂಜೂರಾತಿ ಪತ್ರನೀಡುವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೃಷಿಯಲ್ಲಿ ಮತ್ತು ಜೀವನದ ಉಪಯೋಗಕ್ಕಾಗಿ ರೈತರಿಗೆ ಅನುಕೂಲವಾಗಲಿ ಎಂಬ ಕಾರಣದಿಂದ ಹಸು ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಬಾರಿ ಸಿಂದಗಿ ಮತಕ್ಷೇತ್ರದ ಗೋಲಗೇರಿ ಗ್ರಾಪಂಯನ್ನು ಗೋಲಗೇರಿ, ಡಂಬಳ, ಅಲ್ಲಾಪೂರ, ಸಾಸಾಬಾಳಗ್ರಾಮಗಳನ್ನುಆಯ್ಕೆಮಾಡಲಾಗಿದೆ. ಮುಂಬರುವ ದಿನಮಾನಗಳಲ್ಲಿ ಹಂತ ಹಂತವಾಗಿ ಉಳಿದ ಗ್ರಾಪಂ ವ್ಯಾಪ್ತಿಯ ಗ್ರಾಮಗಳನ್ನು ಆಯ್ಕೆಮಾಡಲಾಗುವುದು. ತಾಲೂಕು ಇಂದು ನೀರಾವರಿಯಿಂದ ಕೂಡಿದೆ. ಹೈನುಗಾರಿಕೆಯಿಂದ ಕೃಷಿಯಲ್ಲಿ ಸಾಧನೆ ಮಾಡಬಹುದು. ಹೈನುಗಾರಿಕೆಯಿಂದ ನಮ್ಮ ಜೀವನವನ್ನೇ ರೂಪಿಸಿಕೊಳ್ಳಬಹುದು. ಹಸು ಖರೀದಿಗಾಗಿ ಸರಕಾರ 30ಸಾವಿರ ರೂ. ಅನುದಾನವನ್ನು ನೀಡುತ್ತದೆ. ರೈತರೆಲ್ಲರೂ ಹಸುವನ್ನು ಖರೀದಿ ಮಾಡಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಈ ವೇಳೆ ಶಿವಪ್ಪಗೌಡ ಬಿರಾದಾರ, ಕೆಡಿಪಿ ಸದಸ್ಯ ಗಂಗಾಧರ ಚಿಂಚೋಳ್ಳಿ, ಮಲ್ಲಣ್ಣ ಸಾಲಿ ಮಾತನಾಡಿ, ಶಾಸಕರು ಸಿಂದಗಿ ತಾಲೂಕಿಗೆ ಶಾಶ್ವತ ಯೋಜನೆಗಳನ್ನು ತೆಗೆದುಕೊಂಡು ಬಂದು ತಮಗೆ ಸಲ್ಲಿಸುತ್ತಿದ್ದು, ಅದರ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೇಕು ಎಂದರು.

## 'ಉದಯರಶ್ಮಿ' ವರದಿ ಪರಿಣಾಮ: ರೋಡ್ ಬ್ರೆಕರ್ ಅಳವಡಿಕೆ



■ ಉದಯರಶ್ಮಿ ದಿನಪತ್ರಿಕೆ

ಮುದ್ದೇಬಿಹಾಳ: ಇಲ್ಲಿನ ಹುಡ್ಕೋ ಗೇಟ್ ಬಳಿ ಮುಖ್ಯ ರಸ್ತೆಯ ಎರಡೂ ಬದಿಗಳಲ್ಲಿ ಅವೈಜ್ಞಾನಿಕವಾದ ರೋಡ್ ಬ್ರೇಕರ್ ಅಳವಡಿಸಿದ ಪರಿಣಾಮ ವಾಹನಗಳ ವೇಗಕ್ಕೆ ಯಾವುದೇ ಕಡಿವಾಣ ಹಾಕಿದಂತಾಗಿರಲಿಲ್ಲ. ಅಪಘಾತಗಳು ಕಡಿಮೆಯಾಗಿರಲಿಲ್ಲ. ಈ ಬಗ್ಗೆ ಇಲ್ಲಿನ ನಗರಾಭಿವೃದ್ಧಿ ಹೋರಾಟ ವೇದಿಕೆಯ ಸಂಚಾಲಕ ಬಸವರಾಜ ನಂದಿಕೇಶ್ವರಮಠ ಹೋರಾಟಗಾರರಾದ ನಾಗೇಂದ್ರ ಶಿವಶಿಂಪಿ ಮತ್ತು ರಫೀಕ ಬೀಳಗಿ "ಉದಯರಶ್ಮಿ" ಪತ್ರಿಕೆಗೆ ದೂರಿದ್ದರು. ಈ ಬಗ್ಗೆ ಪತ್ರಿಕೆ "ಅವೈಜ್ಞಾನಿಕ ರೋಡ್ ಬ್ರೆಕರ್ ಸರಿಪಡಿಸಲು ನಾಗರಿಕರ ಆಗ್ರಹ" ಶೀರ್ಷಿಕೆಯಡಿ ಸುದ್ದಿ ಬಿತ್ತರಿಸಿ ಅಧಿಕಾರಿಗಳ ಗಮನ ಸೆಳೆದಿತ್ತು.

ಸುದ್ದಿಗೆ ಎಚ್ಚೆತ್ತ ಅಧಿಕಾರಿಗಳು ಸೋಮವಾರ ರಾತ್ರಿ ಸರಿಯಾದ ಜಾಗೆಯಲ್ಲಿ ಹಂಪ್ ಅಳವಡಿಸಿದ್ದಾರೆ.

ಈ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಹೋರಾಟಗಾರರು 'ಉದಯರಶ್ಮಿ' ಪತ್ರಿಕೆಯ ಕಾರ್ಯಕ್ಕೆ ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

### ನಾಲತವಾಡ ಪಪಂ ಗೆ ಭೇಟಿ ನೀಡಿದ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅಧಿಕಾರಿಗಳಿಗೆ ಸೂಚನೆ

## ಉಳಿಕೆ ಅನುದಾನದ ಕ್ರಿಯಾಯೋಜನೆಗೆ ಮಂಜೂರು ಪಡೆದುಕೊಳ್ಳಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಮುದ್ದೇಬಿಹಾಳ ತಾಲೂಕಿನ ನಾಲತವಾಡ ಪಟ್ಟಣ ಪಂಚಾಯತಿಗೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಮಂಗಳವಾರ ಭೇಟಿ ನೀಡಿ, ಪಟ್ಟಣ ಪಂಚಾಯತಿಯಿಂದ ಸಂಗ್ರಹವಾಗುತ್ತಿರುವ ತೆರಿಗೆ ವಸೂಲಿ, ನೀರಿನ ಕರ ವಸೂಲಿ, ಅಂಗಡಿ ಮಳಿಗೆಗಳ ಬಾಡಿಗೆ, ಜಾಹೀರಾತು ಪರವಾನಿಗೆ ಸೇರಿದಂತೆ ವಿವಿಧ ವಿಷಯದ ಕುರಿತು ಪ್ರಗತಿ ಪರಿಶೀಲನೆ ನಡೆಸಿದರು.

ಪಟ್ಟಣದಲ್ಲಿ ಎಸ್.ಎಫ್.ಸಿ, 15ನೇ ಹಣಕಾಸು ಯೋಜನೆಯ 2021-22 ರಿಂದ 2024-25ನೇ ಅವಧಿಯವರೆಗೆ ಪ್ರಗತಿಯನ್ನು ಪರಿಶೀಲಿಸಿ ಉಳಿಕೆ ಅನುದಾನದ ಕ್ರಿಯಾ ಯೋಜನೆಗೆ ಮಂಜೂರಾತಿ ಪಡೆದುಕೊಳ್ಳುವಂತೆಯೂ ಹಾಗೂ ಕಾಮಗಾರಿಗಳ ಆದೇಶ ನೀಡಿ ಪ್ರಗತಿ ಸಾಧಿಸಲು ಮುಖ್ಯಾಧಿಕಾರಿಗಳಿಗೆ ಮತ್ತು ಕಿರಿಯ ಅಭಿಯಂತರರಿಗೆ ಸೂಚಿಸಿದರು. ಅಂಬೇಡ್ಕರ ಸರ್ಕಲ್‌ದಲ್ಲಿ ಅಭಿವೃದ್ಧಿ ಕುರಿತು,ಬಸವೇಶ್ವರ ವೃತ್ತದಲ್ಲಿ ಗೂಡಂಗಡಿಗಳ ತೆರವು ಕುರಿತು ಪರಿಶೀಲಿಸಿದ ಅವರು, ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಆದ್ಯತೆಯ ಮೇರೆಗೆ ನಿವಾರಿಸಲು ಸೂಚಿಸಿದರು.

ಎಸ್.ಎಫ್.ಸಿ ವಿಶೇಷ ಅನುದಾನದಡಿ ನಿರ್ಮಾಣವಾಗುತ್ತಿರುವ ಶಾಸಕರ ಮಾದರಿಯ ಪ್ರಾಥಮಿಕ ಕನ್ನಡ ಗಂಡು ಮಕ್ಕಳ ಶಾಲೆಯ ಕಟ್ಟಡ ಕಾಮಗಾರಿ ಪರಿಶೀಲಿಸಿ ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಎಸ್.ಡಬ್ಲ್ಯೂ.ಎಮ್ ಘಟಕದ ಕಸ ವಿಲೇವಾರಿ ಸ್ಥಳಕ್ಕೆ ಭೇಟಿ ನೀಡಿ, ವೈಜ್ಞಾನಿಕವಾಗಿ ಘನ ತ್ಯಾಜ್ಯ ವಿಲೇವಾರಿಗೆ ಕ್ರಮವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತಿಯ ಮುಖ್ಯಾಧಿಕಾರಿ ಆಯ್,ಜಿ. ಕೊಣ್ಣೂರ್, ನಗರಾಭಿವೃದ್ಧಿ ಯೋಜನಾ ನಿರ್ದೇಶಕರಾದ ಬದ್ರುದ್ದಿನ್ ಸೌದಾಗರ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರಾರದ ನಾರಯಣಕರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

### ಬೆಳಗಾವಿ ವಿಭಾಗ ಮಟ್ಟದ ಖೋಖೋ ಪಂದ್ಯಾವಳಿ | ಬೆಳಗಾವಿ ತಂಡ ರನ್ನರ್ ಅಪ್ | ಲವ ಮಾದರ ಗೆ ಆಲ್ ರೌಂಡರ್ ಪ್ರಶಸ್ತಿ

# ವಿಜಯಪುರ ಬಾಲಕ/ಬಾಲಕಿಯರ ತಂಡ ರಾಜ್ಯ ಮಟ್ಟಕ್ಕೆ

■ ಉದಯರಶ್ಮಿ ದಿನಪತ್ರಿಕೆ



ಆಲಮಟ್ಟಿ: ಇಲ್ಲಿನ ಡ್ಯಾಂಸೈಟ್ ನ ಸರ್ಕಾರಿ ಶಾಲಾ ಮೈದಾನದಲ್ಲಿ ಮಂಗಳವಾರ ಜರುಗಿದ ಬೆಳಗಾವಿ ವಿಭಾಗ ಮಟ್ಟದ ಖೋಖೋ ಪಂದ್ಯಾವಳಿಯಲ್ಲಿ ವಿಜಯಪುರದ ಬಾಲಕ ಮತ್ತು ಬಾಲಕಿಯರ ತಂಡ (14 ವಯೋಮಾನದೊಳಗಿನ) ವಿಜೇತರಾಗಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಯಿತು.

ತೀವ್ರ ಕುತೂಹಲ ಕೆರಳಿಸಿದ್ದ ಬಾಲಕರ ಅಂತಿಮ ಪಂದ್ಯದಲ್ಲಿ ವಿಜಯಪುರ ತಂಡ 10 ಅಂಕ ಗಳಿಸಿತು. ಅದರ ಎದುರಾಳಿ ಬೆಳಗಾವಿ ತಂಡವು 7 ಅಂಕ ಗಳಿಸಿ, ಮೂರು ಅಂಕಗಳ ಅಂತರದಿಂದ ಸೋಲನ್ನಪ್ಪಿ ರನ್ನರ್ ಅಪ್ ಆಯಿತು.

ವಿಜಯಪುರ ತಂಡದ ಲವ ಮಾದರ ಆಲ್ ರೌಂಡರ್ ಪ್ರಶಸ್ತಿಗೆ, ಇದೇ ತಂಡದ ರುದ್ರಗೌಡ ಬಿರಾದಾರ ಉತ್ತಮ ರನ್ನರ್ ಹಾಗೂ ಬೆಳಗಾವಿಯ ಹೊನ್ನಪ್ಪ ತರಾಟೆ ಬೆಸ್ಟ್ ಚೇಸರ್ ವೈಯಕ್ತಿಕ ಪ್ರಶಸ್ತಿ ಪಡೆದರು.

ಬಾಲಕಿಯರ ಅಂತಿಮ ಸ್ಪರ್ಧೆ ಏಕಪಕ್ಷೀಯವಾಯಿತು. ವಿಜಯಪುರ ತಂಡ 16 ಅಂಕ, ಬೆಳಗಾವಿ ತಂಡ 8 ಅಂಕ ಪಡೆದು 8 ಅಂಕಗಳ ಲೀಡ್ ನಿಂದ ವಿಜಯಪುರ ತಂಡದ ಬಾಲಕಿಯರು ವಿಜೇತರಾದರು.

ಮೊದಲ ಇನ್ನಿಂಗ್ಸ್ ನಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿದ ವಿಜಯಪುರ ತಂಡದ ಸುಮಂಗಲಾ ಮಂಗಳಗುಡ್ಡ ಬೆಸ್ಟ್ ರನ್ನರ್ ಪ್ರಶಸ್ತಿಗೂ ಭಾಜನರಾದರು.

ಇದೇ ತಂಡದ ಸಂಜನಾ ವಡವಡಗಿ ಬೆಸ್ಟ್ ಚೇಸರ್ ಪ್ರಶಸ್ತಿಗೆ ಪಾತ್ರರಾದರು. ಬೆಳಗಾವಿಯ ನಿಂಗಮ್ಮ ಉತ್ತಮ ಆಲ್ ರೌಂಡರ್ ಪ್ರಶಸ್ತಿಗೆ ಭಾಜನರಾದರು.

ನಿಡಗುಂದಿಯ ಮಣಗೂರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿದ್ದ ವಿಜಯಪುರ ಬಾಲಕರ ತಂಡ ಹಾಗೂ ಸಮೀಪದ ಬೇನಾಳ ಆರ್ ಎಸ್ ಶಾಲೆಯ ವಿದ್ಯಾರ್ಥಿನಿಯರಿದ್ದ ಬಾಲಕಿಯರ ತಂಡ ಬಹುತೇಕ ಸ್ಥಳೀಯರೇ ಆಗಿದ್ದರಿಂದ ಸಹಸ್ರಾರು ಕ್ರೀಡಾಭಿಮಾನಿಗಳು ಬೆಳಿಗ್ಗೆಯಿಂದಲೇ ಮೈದಾನದಲ್ಲಿದ್ದು ಕ್ರೀಡಾಪಟುಗಳಿಗೆ ಹುರಿದುಂಬಿಸಿದರು.

ಮೈದಾನದಲ್ಲಿಯೇ ಪ್ರತಿ ಪಂದ್ಯದ ಪ್ರತಿ ಇನ್ನಿಂಗ್ಸ್ ಮುಗಿದ ತಕ್ಷಣ ಕ್ರೀಟಾಪಟುಗಳಿಗೆ ಕುಡಿಯುವ ನೀರು, ಮಜ್ಜಿಗೆ ಹಾಗೂ ಹಣ್ಣಿನ ವ್ಯವಸ್ಥೆ ಮಾಡಲಾಗಿ-ತ್ತು, ಕ್ರೀಡಾಪಟುಗಳು, ಕ್ರೀಡಾಭಿಮಾನಿಗಳು, ಪ್ರೇಕ್ಷಕರ ಪ್ರತಿಯೊಬ್ಬರಿಗೂ ಉತ್ತರಕರ್ನಾಟಕ ಶೈಲಿಯ ಊಟದ ವ್ಯವಸ್ಥೆ ಮಾಡಿದ್ದರು. ಸಂಘಟಕರು ಅಚ್ಚುಕಟ್ಟುತನಕ್ಕೆ ಜನ ಕೊಂಡಾಡಿದರು.

ಬಾಲಕಿಯರ ತಂಡದ ಕೋಚ್ ಎನ್.ಬಿ.ದಾಸರ ಹಾಗೂ ಮಣಗೂರ ಶಾಲೆಯ ಮುಖ್ಯ ಗುರು ಆರ್.ಜಿ. ಬುಲಾತಿಯವರನ್ನು ಕ್ರೀಡಾಭಿಮಾನಿಗಳು ಹೆಗಲಮೇಲೆ ಹೊತ್ತು ಮೈದಾನ ತುಂಬಾ ಮೆರವಣಿಗೆ ಮಾಡಿ ಗುಲಾಲು ಎರಚಿ ಸಂಭ್ರಮಿಸಿದರು.

**ಪ್ರಶಸ್ತಿ ವಿತರಣೆ:**

ಸಂಜೆ ನಡೆದ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ವಿಜೇತರಿಗೆ ಪ್ರಶಸ್ತಿ ವಿತರಿಸಿ ಸಂಘಟಕ ಚಂದ್ರಶೇಖರ ನುಗ್ಗಲಿ ಮಾತನಾಡಿ, ಕ್ರೀಡಾಕೂಟ ಆಯೋಜಿಸಿದ ಬಗೆಯನ್ನು ವಿವರಿಸಿದರು.

ಎ.ಎಸ್. ಲಾಳಶೇರಿ, ಎಸ್.ಎಂ. ಪಾಟೀಲ, ವಿಜಯಕುಮಾರ ದೇಸಾಯಿ, ಅಶೋಕ ಬೂದಿಹಾಳ, ಎಂ.ಎಸ್. ಮುಕಾರ್ತಿಹಾಳ, ಎಸ್.ಎಚ್. ಬಿರಾದಾರ, ಶಂಕರ ಚವ್ಹಾಣ, ಪರಶುರಾಮ ಪವ್ಮಾರ, ಎಸ್.ಎನ್. ಮಿಣಜಗಿ, ಎಚ್.ಎಂ. ಬಲವಾಡ, ಎಸ್.ಎಂ. ಪಾಟೀಲ, ಎಂ.ಆರ್. ಮಕಾನದಾರ, ಎಂ.ಎಂ. ಮುಲ್ಲಾ, ಸಲೀಂ ದಡೆದ, ಎಂ.ಬಿ. ಬಿರಾದಾರ, ಆರ್.ಬಿ. ಗೌಡರ. ವಿ.ಕೆ. ಮಸೂತಿ, ಆರ್.ಜಿ.ಬುಲಾತಿ ಮತ್ತೀತರರಿದ್ದರು.

ಬಸವರಾಜ ಯರವಿನತೆಲಿಮಠ ಅಧ್ಯಕ್ಷತೆ ವಹಿಸಿದ್ದರು.

### 270 ಕ್ರೀಡಾಪಟುಗಳಿಗೆ ಸನ್ಮಾನ

ವಿಭಾಗ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿದ ಪ್ರತಿ ಆಟಗಾರ, ಕೋಚ್ ಸೇರಿ ಒಟ್ಟಾರೇ 270 ಜನ ಕ್ರೀಡಾಪಟುಗಳನ್ನು ಸನ್ಮಾನಿಸಿದ್ದು ವಿಶೇಷ ಹಾಗೂ ಇದೇ ಮೊದಲು.

### ಕ್ರೀಡಾಕೂಟ ಉದ್ಘಾಟನೆ

ಮಂಗಳವಾರ ಬೆಳಿಗ್ಗೆ 7 ಕ್ಕೆ ಕ್ರೀಡಾಕೂಟಕ್ಕೆ ಆಲಮಟ್ಟಿ ಅಣೆಕಟ್ಟು ವಲಯದ ಮುಖ್ಯ ಎಂಜಿನಿಯರ್ ಎಚ್. ಎನ್. ಶ್ರೀನಿವಾಸ ಕ್ರೀಡಾಧ್ವಜಾರೋಹಣ ನೆರವೇರಿಸಿ ಚಾಲನೆ ನೀಡಿದರು.

ಆಫ್ ಓ ಮಹೇಶ ಪಾಟೀಲ, ಕ್ರೀಡಾಕೂಟದ ಸಂಘಟಕ, ಶಿಕ್ಷಕರ ಸಂಘದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಲಿ, ನೌಕರರ ಸಂಘದ ಅಧ್ಯಕ್ಷ ಎಸ್.ಬಿ. ದಳವಾಯಿ, ಜಿಲ್ಲಾ ದೈಹಿಕ ಶಿಕ್ಷಣ ಪರಿವೀಕ್ಷಕ ಎ.ಎಸ್. ಲಾಳಶೇರಿ, ಎಸ್.ಎಸ್. ಅವಟಿ, ಎನ್.ಬಿ.ದಾಸರ, ಸುರೇಶ ಆಲೂರ, ಮೆರೆಕೂರ ಮತ್ತೀತರರು ಇದ್ದರು.

# ವಿಶ್ವ ಭ್ರಾತೃತ್ವದ ದಾರ್ಶನಿಕ ರಾಷ್ಟ್ರಕವಿ ಕುವೆಂಪು



ಕಲಬುರಗಿ: ಮಾನವ ಹುಟ್ಟುತ್ತಾ ವಿಶ್ವಮಾನವನಾಗಿ ಹುಟ್ಟುತ್ತಾನೆ. ಬೆಳೆಯುತ್ತಲೇ ಆತ ಜಾತಿ, ಧರ್ಮಗಳು, ಮೌಢ್ಯತೆಯಂತಹ ಸಂಕೋಲೆಗಳಲ್ಲಿ ಸಿಲುಕಿ ಅಲ್ಪಮಾನವನಾಗುತ್ತಾನೆ. ಆತನಿಗೆ ಶಿಕ್ಷಣ, ಮೌಲ್ಯಗಳನ್ನು ನೀಡಿ ಪುನಃ ವಿಶ್ವಮಾನವನನ್ನಾಗಿ ಮಾಡುವ, ಸರ್ವರು ಸಮಾನರು ಎಂಬ ಭ್ರಾತೃತ್ವದ ಚಿಂತನೆ ಸಾರಿದ ದಾರ್ಶನಿಕ ರಾಷ್ಟ್ರಕವಿ ಕುವೆಂಪು ಅವರ ಕೊಡುಗೆ ಅನನ್ಯವಾಗಿದೆ ಎಂದು ಉಪನ್ಯಾಸಕ, ಲೇಖಕ ಎಚ್.ಬಿ.ಪಾಟೀಲ ಅಭಿಪ್ರಾಯಪಟ್ಟರು.

ನಗರದ ಆಳಂದ ರಸ್ತೆಯ ಶಿವ ನಗರದಲ್ಲಿರುವ 'ಮಲ್ಲಿನಾಥ ಮಹಾರಾಜ ಶಾಲೆ'ಯಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ ರಾಷ್ಟ್ರಕವಿ ಕುವೆಂಪುರವರ 30ನೇ ಪುಣ್ಯಸ್ಮರಣೆಯಲ್ಲಿ ಮಾತನಾಡುತ್ತಿದ್ದರು.

ಕುವೆಂಪು ಅವರು ಪ್ರತಿಯೊಬ್ಬರಲ್ಲಿಯೂ ಕನ್ನಡ ನಾಡು, ನುಡಿ, ಭಾಷೆ, ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅರಿವು ಮೂಡುವಂತೆ ತಮ್ಮದೇ ಆದ ಅನೇಕ ಮೌಲ್ಯಯುತ ಸಾಹಿತ್ಯ ಕೃಷಿಯನ್ನು ಮಾಡಿದ್ದಾರೆ. ಕನ್ನಡಿಗರ ಸ್ವಾಭಿಮಾನವನ್ನು ಬಡಿದೆಬ್ಬಿಸಿದ ಮಹಾಕ ವಿಯಾಗಿದ್ದಾರೆ. ಇವರು ಮಾನವೀಯ ಮೌಲ್ಯಗಳ ಮಹಾನ ಚೇತನವಾಗಿದ್ದಾರೆ. ಮಹಾಕಾವ್ಯ, ನಾಟಕ, ಬಿಡಿ ಕವನ ಸಂಕಲನ, ಕಥಾ ಸಂಕಲನ, ಆತ್ಮಕಥೆ, ವಿಮರ್ಶೆ, ಜೀವನಚರಿತ್ರೆ, ವೈಚಾರಿಕ ಲೇಖನ ಹೀಗೆ ಬಹುಮುಖ ಸಾಹಿತ್ಯ ಕೃಷಿ ಮಾಡಿದ್ದಾರೆ ಎಂದರು.

ಜಾತಿ, ಧರ್ಮ, ಮೌಢ್ಯತೆಯಂತಹ ಮುಂತಾದ ಸಾಮಾಜಿಕ ಅನಿಷ್ಟಗಳ ವಿರುದ್ಧ 'ವಿಶ್ವ ಭ್ರಾತೃತ್ವ'ವನ್ನು ಪ್ರತಿಪಾದಿಸಿದ್ದಾರೆ. ವೈಚಾರಿಕತೆಯನ್ನು ವಿದ್ಯಾರ್ಥಿ ದೆಸೆಯಿಂದಲೇ ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಕ್ರಾಂತಿಯ ಮನೋಭಾವ ಕೇವಲ ರಾಜಕೀಯಕ್ಕೆ ಮಾತ್ರ ಸೀಮಿತವಾಗಿರದೆ, ಸಾಹಿತ್ಯದಲ್ಲಿಯೂ ಇರಬೇಕೆಂದು ಅವರ ನಿಲುವಾಗಿತ್ತು. ಏಕದೇವೋಪಾಸನೆ, ಬಸವಣ್ಣನವರನ್ನು 'ಯುಗ ಪ್ರವರ್ತಕ'ರೆಂದು ಹೇಳಿದ್ದಾರೆ. 'ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು' ಎಂದು ಹೇಳುವ ಮೂಲಕ ಎಲ್ಲರಲ್ಲಿಯೂ ಕನ್ನಡತನ ಗುಣ ಮೈಗೂಡಿಸಿಕೊಳ್ಳಬೇಕು ಎಂದು ಕರೆ ಕೊಟ್ಟಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಮುಖ್ಯಸ್ಥ ಅಮರ ಜಿ.ಬಂಗರಗಿ, ಮುಖ್ಯ ಶಿಕ್ಷಕಿ ಚಂಪಾಕಲಾ ನೆಲ್ಲೂರೆ ಹಾಗೂ ವಿದ್ಯಾರ್ಥಿಗಳಿದ್ದರು.

# ವೀರ ವನಿತೆ ಓಬವ್ವಳ.ದೈರ್ಯ ಸಾಹಸ ನಮಗೆಲ್ಲ ಮಾದರಿಯಾಗಬೇಕು:ಉಪನ್ಯಾಸಕಿ ಸವೀತಾ ಬಿ ನಾಸಿ




ಕಲಬುರಗಿ: ಹೆಣ್ಣು ಮಕ್ಕಳು ಸಮಯ ಬಂದರೆ ದುಷ್ಟರನ್ನು ನಾಶ ಮಾಡಬಲ್ಲಳು ಅದಕ್ಕೆ ವೀರ ವನತೆ ಒನಕೆ ಓಬವ್ವ ನಮಗೆ ಮಾದರಿಯಾಗಿದ್ದಾಳೆ ಎಂದು ಜೇವರ್ಗಿ ಕಾಲೋನಿಯ ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯ ಸಮಾಜ ಶಾಸ್ತ್ರ ಉಪನ್ಯಾಸಕಿ ಸವೀತಾ ಬಿ.ನಾಸಿ ಹೇಳಿದರು

ಸೋಮವಾರದಂದು ಇಲ್ಲಿನ ವೀರ ವನಿತೆ ಒನಕೆ ಓಬವ್ವ ಜಯಂತಿ ಅಂಗವಾಗಿ ಡಾ.ಎಸ್.ಎಂ.ಪಂಡಿತ ರಂಗ ಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್, ಕಲಬುರಗಿ ಇವರುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ.ವಿಶೇಷ ಉಪನ್ಯಾಸ ನೀಡಿದರು. ಚಿತ್ರದುರ್ಗದ ಕೋಟೆಗೆ ದೊಡ್ಡ. ಇತಿಹಾಸವಿದ್ದು ಅದು ವೀರ ನಾರಿ ಓಬವ್ವಳಿಂದ ಮತ್ತಷ್ಟು ಪ್ರಖ್ಯಾತ ಪಡೆಯಿತು

ಓಬವ್ವನ ವಿಶೇಷತೆ : ಯುದ್ಧ ಎಂದರೆ ಇಬ್ಬರು ರಾಜರಗಳ ನಡುವೆ ನಡೆಯುವಂತಹದ್ದು ಆದರೆ ಈ ಮಹಿಳೆ ತನ್ನ ಗಂಡ ಮಾವ ಮಗನ ಒಂದು ಚಿಕ್ಕ ಸಂಸಾರದಲ್ಲಿ ಇದ್ದವಳು ಆಕೆಗೆ ಇದರ ಬಗ್ಗೆ ಇಂತ್ತಿಚ್ಚು ಜ್ಞಾನ ವಿಲ್ಲ. ಸಮಯಕ್ಕೆ ಸರಿಯಾಗಿ ಚಿತ್ರಕೋಟೆ ತನ್ನ ಊರು ತನ್ನ ಸ್ವತ್ತು ಎಂದು ಬಿಟ್ಟರೆ ಮತ್ತೇನ್ನು ಗೋತ್ತಿಲ್ಲ ಅವಳಿಗೆ ಹೈದಾರಲಿ ಸೇನಾನಿಗಳು ಆ ಕಳ್ಳ ಕಿಂಡಿಯಲ್ಲಿ ಬಂದಿದ್ದು ಕಂಡು ಮನೆಗೆ ಓಡಿ ಹೋಗಿ ಓನಕೆ ತಂದು ಸೈನಿಕರನ್ನು ಕೊಂದು ಹಾಕುತ್ತಾಳೆ ಓಬವ್ವಳ ಧೈರ್ಯ ಸಾಹಸ ಮೆಚ್ಚಿ ಮದಕರಿ ರಾಜ ಒನಕೆ ಓಬವ್ವನಿಗೆ ಕೃತಜ್ಞತೆಯನ್ನು ಸಲ್ಲಿಸಿದರು. ಚಿತ್ರದುರ್ಗ ಕೋಟೆಯ ರಕ್ಷಿಸಿದ ವೀರ ಓಬವ್ವಳ.ನೆನಪಿಗಾಗಿ ಆ ಕಿಂಡಿಗೆ ಅವಳದೇ ಹೆಸರು ಇಟ್ಟರು ಎಂದು ಹೇಳಿದರು.

ಜಿಲ್ಲಾಧಿಕಾರಿ ಕಾರ್ಯಾಲಯ ಸಹಾಯಕ ನಿರ್ದೇಶಕರು, ಶಿವಶರಣಪ್ಪ ದನ್ನಿ, ಮಾತನಾಡಿ ಅವರು ಚಿತ್ರದುರ್ಗ ಒಂದು ಸಣ್ಣ ಕೋಟೆ ಇಲ್ಲಿ ಸಣ್ಣ ಸಣ್ಣ ಕುಟುಂಬಗಳು ವಾಸಿಸುತ್ತವೆ. ಇಲ್ಲಿ ಇರುವ ಜನರು ಪ್ರಾಮಾಣಿಕ ರಾಷ್ಟ್ರಭಕ್ತಿ ಹೊಂದಿದವರು ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯ ಸುರೇಶ ಬಡಿಗೇರ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾಲೇಜ ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆಯಲ್ಲಿ ನಾಲ್ಕು ವಿದ್ಯಾರ್ಥಿಗಳನ್ನು ಪ್ರಥಮ ಬಹುಮಾನ ಲಾಲ್ ಬಿ, ದ್ವಿತೀಯ ಬಹುಮಾನ ಅನೀಕಾ ಸುಬಹೇನಿಯಾ, ಸ್ನೇಹಾ ಮತ್ತು ಸೃಷ್ಟಿ ತೃತೀಯ ಬಹುಮಾನ ಪಡೆದರು.

ಕಾರ್ಯಕ್ರಮದಲ್ಲಿ ಪಂಪಣ್ಣಾ ಗ್ರೇಡ್–1 ತಹಶೀಲ್ದಾರ ಉದ್ಘಾಟಿಸಿದರು. ಶಿವಶರಣಪ್ಪ ಮೂಳೆಗಾಂವ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ದತ್ತಪ್ಪಾ ಸಾಗನೂರ, ನಂದಿನಿ ಸನ್ಬಾಲ್, ಸಂಪತ್ತ ಒಳಕೇರ, ಅರುಣ ಭರಣಿ, ನರಸಪ್ಪ, ಮಂಜುನಾಥ್ ನಾಲವಾರಕರ ಉಪಸ್ಥಿತರಿದ್ದರು.

# ಶೌರ್ಯ, ಸಾಹಸದ ವೀರ ಮಹಿಳೆ ಒನಕೆ ಓಬವ್ವ



ಕಲಬುರಗಿ:ಹೈದರಲಿಯ ಸೈನ್ಯದ ವಿರುದ್ಧ ಹೋರಾಡಿ ಚಿತ್ರದುರ್ಗ ಮದಕರಿ ಸಾಮ್ರಾಜ್ಯವನ್ನು ರಕ್ಷಿಸಿದ ಒನಕೆ ಓಬವ್ವ ಶೌರ್ಯ, ಸಾಹಸದ ವೀರ ಮಹಿಳೆಯಾಗಿ ಇಡೀ ಸಮಸ್ಥ ಮಹಿಳಾ ಸಮುದಾಯಕ್ಕೆ ಮಾದರಿಯಾಗಿದ್ದಾರೆ. ತನ್ನ ಯಜಮಾನಿಕೆಯ ಅಸ್ತಿತ್ವವನ್ನು ಉಳಿಸುವುದಕ್ಕಾಗಿ ಉಪ್ಪು ತಿಂದ ಮನೆಗೆ ದ್ರೋಹ ಬಗೆಯದೆ ಸ್ವಾಮಿನಿಷ್ಠೆಯನ್ನು ಮೆರೆಯುವ ಮೂಲಕ ದೇಶಕ್ಕೆ ನಾಡಿನ ಕೀರ್ತಿಯನ್ನು ಹೆಚ್ಚಿಸಿದ ಒಬವ್ವ ಮಾದರಿಯಾಗಿದ್ದಾರೆ ಎಂದು ಉಪನ್ಯಾಸಕ ಎಚ್.ಬಿ.ಪಾಟೀಲ ಹೇಳಿದರು.

ಜೇವರ್ಗಿ ಪಟ್ಟಣದ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಸೋಮವಾರ ಜರುಗಿದ ಡಾ.ಮೌಲಾನಾ ಆಜಾದ್, ಒನಕೆ ಓಬವ್ವ ಜಯಂತಿ ಕಾರ್ಯಕ್ರಮದಲ್ಲಿ ಉಭಯ ಮಹನೀಯರ ಭಾವಚಿತ್ರಕ್ಕೆ ನಮನಗಳನ್ನು ಸಲ್ಲಿಸಿ ಅವರು ಮಾತನಾಡುತ್ತಿದ್ದರು.

ಶಾಲೆಯ ಪ್ರಾಂಶುಪಾಲ ಜಗನ್ನಾಥ ಕಾವಲೆ ಮಾತನಾಡಿ, ಡಾ.ಆಜಾದ್‌ರು ಸ್ವಾತಂತ್ರ್ಯ ಹೋರಾಟಗಾರರಾಗಿ, ದೇಶದ ಪ್ರಥಮ ಶಿಕ್ಷಣ ಸಚಿವರಾಗಿ, ಶಿಕ್ಷಣ ತಜ್ಞರಾಗಿ ನಮ್ಮ ದೇಶಕ್ಕೆ ಅಮೋಘವಾದ ಕೊಡುಗೆಯನ್ನು ನೀಡಿದ್ದಾರೆ. ಅವರ ಜನ್ಮದಿನವನ್ನು 'ರಾಷ್ಟ್ರೀಯ ಶಿಕ್ಷಣ ದಿನ'ವನ್ನಾಗಿ ಆಚರಿಸುವ ಮೂಲಕ ಅವರಿಗೆ ಗೌರವ ನಿಡಲಾಗುತ್ತದೆ. ಪ್ರತಿಯೊಬ್ಬರು ಶಿಕ್ಷಣ ಪಡೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ಯಡ್ರಾಮಿಯ ಕದಂಬ ಪಿಯು ಕಾಲೇಜಿನ ಪ್ರಾಂಶುಪಾಲ ದೇವೀಂದ್ರ ಬಿ.ಗುಡೂರ್, ಶಾಲೆಯ ಶಿಕ್ಷಕರಾದ ಮಲ್ಲಿಕಾರ್ಜುನ ಸುಲೆಪೇಟ್, ಅನೀಲಕುಮಾರ ಗೋನಾಳ್, ಶ್ರೀಶೈಲ್ ಮ್ಯೆಂದರ್ಗಿ, ನಿಂಗಣ್ಣ ಪೂಜಾರಿ, ಸಂಶೂನೀಸಾ ಬೇಗಂ, ಅಶೋಕ ಅವಟೆ, ರಮೇಶ ಬಿರಾದಾರ, ಹುಲಿಕಂತರಾಯ, ಗೀತಾ ಜಿ. ಮಹೇಶ್ವರಿ, ಕೊತಲಪ್ಪ, ಜಯಶ್ರೀ ಹಿರೇಮಠ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ತಿರುಪತಿಗೆ ಹೋದಾಗ ಮನೆ ಬೀಗ ಮುರಿದು 1.35 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು

ಕಲಬುರಗಿ,: ಮನೆಯವರು ಮನೆಗೆ ಬೀಗ ಹಾಕಿಕೊಂಡು ತಿರುಪತಿಗೆ ಹೋದಾಗ ಕಳ್ಳರು ಮನೆ ಬೀಗ ಮುರಿದು 1.35 ಲಕ್ಷ ರೂ.ಮೌಲ್ಯದ ನಗನಾಣ್ಯ ದೋಚಿಕೊಂಡು ಹೋಗಿರುವ ಘಟನೆ ಇಲ್ಲಿನ ಗೋದುತಾಯಿ ನಗರದಲ್ಲಿ ನಡೆದಿದೆ.

ತುಳಜಪ್ಪಾ ಹೂಗಾರ ಎಂಬುವರ ಮನೆ ಬೀಗ ಮುರಿದು 1 ಲಕ್ಷ ನಗದು ಹಣ, 25 ಸಾವಿರ ರೂ. ಮೌಲ್ಯದ 10 ಗ್ರಾಂ.ಬಂಗಾರದ ಕಿವಿಯೋಲೆ, 10 ಸಾವಿರ ರೂ.ಮೌಲ್ಯದ 50 ಗ್ರಾಂ.ಬೆಳ್ಳಿ ದೇವರ ಪೂಜೆ ಮಾಡುವ ಸಾಮಾನುಗಳು ಸೇರಿ 1.35 ಲಕ್ಷ ರೂ. ಮೌಲ್ಯದ ನಗನಾಣ್ಯ ದೋಚಿಕೊಂಡು ಹೋಗಲಾಗಿದೆ.

ಈ ಸಂಬಂಧ ಅಶೋಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

ಮನೆ ಬೀಗ ಮುರಿದು 1.18 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು:

ಮನೆ ಬೀಗ ಮುರಿದು 1,18,600 ರೂ.ಮೌಲ್ಯದ ನಗನಾಣ್ಯ ಕಳವು ಮಾಡಿರುವ ಘಟನೆ ಜೇವರ್ಗಿ ರಸ್ತೆಯ ಅಟಲ್ ಬಿಹಾರಿ ವಾಜಪೇಯಿ ಬಡಾವಣೆಯಲ್ಲಿ ನಡೆದಿದೆ.

ಸತ್ಯನಾರಾಯಣ ಮಡಿವಾಳ ಎಂಬುವರ ಮನೆ ಬೀಗ ಮುರಿದು ಕಳ್ಳರು 35 ಸಾವಿರ ರೂ.ಮೌಲ್ಯದ 5 ಗ್ರಾಂ.ಬಂಗಾರದ ಕಿವಿಯೋಲೆ, 3,500 ರೂ.ಮೌಲ್ಯದ 1 ಗ್ರಾಂ.ಬಂಗಾರದ ಮೂಗಿನ ಬಟ್ಟು, 28 ಸಾವಿರ ರೂ. ಮೌಲ್ಯದ 40 ತೊಲೆ ತೂಕದ 4 ಜೊತೆ ಬೆಳ್ಳಿ ಕಾಲು ಚೈನ, 10 ಗ್ರಾಂ.ಬೆಳ್ಳಿ ಚೈನ, 1400 ರೂ.ಮೌಲ್ಯದ 2 ತೊಲೆ ಬೆಳ್ಳಿ ಲಿಂಗದಕಾಯಿ ಮತ್ತು 50 ಸಾವಿರ ರೂ.ನಗದು ಸೇರಿ 1.18 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು ಮಾಡಿಕೊಂಡು ಹೋಗಿದ್ದಾರೆ.

ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

# ಕಡಿದು ಬಿದ್ದ ಕನ್ವಿಯರ್ ಬೆಲ್ಟ್: ತಪ್ಪಿದ ಭಾರಿ ಅನಾಹುತ



ಕಲಬುರಗಿ: ಕಾರ್ಮಿಕರು ಯಾರೂ ಇಲ್ಲದ ವೇಳೆಬೃಹತ್ ಗಾತ್ರದ ಕನ್ವಿಯರ್ ಬೆಲ್ಟ್ ಕಡಿದು ಬಿದ್ದು ಸಂಭವಿಸಬಹುದಾಗಿದ್ದ ಭಾರಿ ಅನಾಹುತ ತಪ್ಪಿದ ಘಟನೆಯೊಂದು ಸೇಡಂ ತಾಲೂಕಿನ ಮಳಖೇಡ ಸಮೀಪದ ಅಲ್ಟ್ರಾಟೆಕ್ ರಾಜಶ್ರೀ ಸಿಮೆಂಟ್ ಫ್ಯಾಕ್ಟರಿ ಆವರಣದಲ್ಲಿ ಸಂಭವಿಸಿದೆ.

ಸಿಮೆಂಟ್ ಚೀಲಗಳನ್ನು ಪ್ಯಾಕಿಂಗ್ ಮಾಡುವ ಸ್ಥಳದಲ್ಲಿ ಯಾರೂ ಇಲ್ಲದ ಹೊತ್ತಿನಲ್ಲಿ ಬೃಹತ್ ಗಾತ್ರದ ಬೆಲ್ಟ್ ಕಡಿದು ಬಿದ್ದಿದೆ. ಅದೃಷ್ಟವಶಾತ್ ಕೂದಲೆಳೆ ಅಂತರದಲ್ಲಿ ಭಾರಿ ಅನಾಹುತ ತಪ್ಪಿದಂತಾಗಿದೆ.

ಸಿಮೆಂಟ್ ತಯಾರಿಕೆಗೆ ಬಳಸುವ ಕಚ್ಚಾ ವಸ್ತುಗಳನ್ನು ಸಾಗಿಸಲು ಬಳಸುವ ಕನ್ವೆಯರ್ ಬೆಲ್ಟ್ ಅಡಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಯಾರೂ ಇಲ್ಲದ ವೇಳೆ ಈ ದುರಂತ ಸಂಭವಿಸಿದ್ದರಿಂದ ಭಾರಿ ಪ್ರಮಾಣದ ಪ್ರಾಣಾಪಾಯ ತಪ್ಪಿದಂತಾಗಿದೆ. ಕಾರ್ಖಾನೆಯ ಸುತ್ತಮುತ್ತ ನಿರಂತರ ಸ್ಫೋಟ ಪ್ರಕ್ರಿಯೆ ಕೈಗೊಳ್ಳುವುದರಿಂದ ಹೀಗೆ ಬೆಲ್ಟ್ ಕಡಿದು ಬಿದ್ದಿರುವ ಸಾಧ್ಯತೆಯಿದ್ದು, ಕೂಡಲೆ ಕಾರ್ಮಿಕರ ಸುರಕ್ಷತೆಗೆ ಅಗತ್ಯ ಪೂರಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಕಾರ್ಮಿಕರು ಹಾಗೂ ಸ್ಥಳೀಯರು ಒತ್ತಾಯಿಸಿದ್ದಾರೆ.

# 25 ಕೋಟಿ ವೆಚ್ಚದ ರಸ್ತೆ ಸುಧಾರಣೆಗೆ ಸಚಿವ ಡಾ ಶರಣಪ್ರಕಾಶ್ ಪಾಟೀಲ್ ಚಾಲನೆ



ಸೇಡಂ, : ತಾಲೂಕಿನ ಇಟ್ಕಾಲ್ ಗ್ರಾಮದ ಹೈದ್ರಾಬಾದ ಹೆದ್ದಾರಿ ದ್ವಾರ ಬಾಗಿಲ ಕಮಾನ್ ಹತ್ತಿರ ತಾಲೂಕಿನ ವಿವಿಧ ಆಯ್ದ ಭಾಗಗಳಲ್ಲಿ 25.00 ಕೋಟಿ ವೆಚ್ಚದಲ್ಲಿ ರಸ್ತೆ ಸುಧಾರಣೆಯ ಕಾಮಗಾರಿಗಳಿಗೆ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಅಭಿವೃದ್ಧಿ ಉದ್ಯಮಶೀಲತ ಮತ್ತು ಜೀವನೋಪಾಯ ಸಚಿವರಾದ ಡಾ.ಶರಣಪ್ರಕಾಶ್ ಆರ್. ಪಾಟೀಲ್ ಊಡಗಿ ಚಾಲನೆ ನೀಡಿ ಮಾತನಾಡಿದರು.

ಈ ವೇಳೆಯಲ್ಲಿ ಕಲ್ಬುರ್ಗಿ ಸಂಸದರಾದ ರಾಧಾಕೃಷ್ಣ ದೊಡ್ಡಮನಿ, ರಾಜ್ಯ ತೋಟಗಾರಿಕೆ ಮಹಾಮಂಡಳಿ ಮಾಜಿ ಅಧ್ಯಕ್ಷರಾದ ಬಸವರಾಜ್ ಪಾಟೀಲ ಊಡಗಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನಾಗೇಶರಾವ್ ಮಾಲಿ ಪಾಟೀಲ್, ಸಹಾಯಕ ಆಯುಕ್ತರಾದ ಪ್ರಭು ರೆಡ್ಡಿ ಕೆ.ಎ.ಎಸ್, ತಹಸಿಲ್ದಾರ್ ಶ್ರೀಯಾಂಕ್ ಧನುಶ್ರೀ, ತಾಪಂ ಇಓ ಚನ್ನಪ್ಪ ರಾಯಣ್ಣನವರ,ಬ್ಲಾಕ್ ಕಾಂಗ್ರೆಸ್ ಸಮಿತಿ ಸೇಡಂ ಅಧ್ಯಕ್ಷರಾದ ಶಿವಶರಣರೆಡ್ಡಿ ಪಾಟೀಲ್, ಬ್ಲಾಕ್ ಕಾಂಗ್ರೆಸ್ ಸಮಿತಿಯ ಮುಧೋಳ್ ಅಧ್ಯಕ್ಷರಾದ ರವೀಂದ್ರ ನಂದಿಗಾಮ,ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರಾದ ಡಿ.ಎಲ್. ಗಾಜರ,ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಶಿವಶರಣ ಬಿ. ಜೇವರ್ಗಿ, ನಾಗೇಶ್ ಕಾಳಾ, ನಾಗೇಂದ್ರಪ್ಪ ಸಾಹುಕಾರ, ಮಹಮ್ಮದ್ ಮದನ, ಶಂಕರ್ ಪಾಟೀಲ್, ಸೇರಿದಂತೆ ಹಲವರು ಇದ್ದರು.

# ನ. 24ರಂದು ಸಾಧಕ ಮಹಿಳೆಯರಿಗೆ ಮಾತೋಶ್ರೀ ದಾಕ್ಷಾಯಿಣಿ ಅವ್ವಾ ಪ್ರಶಸ್ತಿ

ಕಲಬುರಗಿ: ಶರಣಬಸವ ವಿಶ್ವವಿದ್ಯಾಲಯ ಹಾಗೂ ಭಾರತೀಯ ಶಿಕ್ಷಣ ಮಂಡಲ ಕರ್ನಾಟಕ ಉತ್ತರ ಪ್ರಾಂತ ಕಲಬುರಗಿ, ಇವರ ಸಹಯೋಗದಲ್ಲಿ ಆಯೋಜಿಸಿರುವ "ಸಶಕ್ತ ಮಹಿಳೆ ಸಧೃಢ ಭಾರತ" ಪ್ರಾಂತ ಮಟ್ಟದ ಮಹಿಳಾ ಸಮಾವೇಶವು ಇದೇ ನವೆಂಬರ್ 24ರಂದು ಕಲಬುರಗಿಯ



ಪೂಜ್ಯ ಬಸವರಾಜಪ್ಪ ಅಪ್ಪಾ ಸ್ಮರಣಾರ್ಥ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದು ಈ ಸಮಾವೇಶದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ "ಮಾತೋಶ್ರೀ ದಾಕ್ಷಾಯಿಣಿ ಅವ್ವಾ" ಪ್ರಶಸ್ತಿ ನೀಡಿ ಗೌರವಿಸಿ ಸನ್ಮಾನಿಸಲಾಗುವುದು ಎಂದು ಭಾರತೀಯ ಶಿಕ್ಷಣ ಮಂಡಲದ ಜಿಲ್ಲಾಧ್ಯಕ್ಷರು ಹಾಗೂ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳಾದ ಶ್ರೀ ಬಸವರಾಜ ದೇಶಮುಖ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಸಕ್ತರು, ವಿಶೇಷವಾಗಿ ಉತ್ತರ ಕರ್ನಾಟಕದ ಮಹಿಳೆಯರು, ಶಿಕ್ಷಣ, ಆರೋಗ್ಯ, ಕ್ರೀಡೆ, ಸಾಮಾಜಿಕ, ವಿಜ್ಞಾನ ಮತ್ತು ತಂತ್ರಜ್ಞಾನ, ಸಾಹಿತ್ಯ, ರಂಗಭೂಮಿ ಮತ್ತು ಸಿನಿಮಾ, ಸ್ವ–ಉದ್ಯೋಗ, ಮಾಧ್ಯಮ, ಕೃಷಿ, ಆಧ್ಯಾತ್ಮಿಕ, ಪೋಲಿಸ್ ಮತ್ತು ರಕ್ಷಣಾ ಕ್ಷೇತ್ರ, ರಾಜಕೀಯ, ನೃತ್ಯ ಹೀಗೆ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರು ಈ "ಮಾತೋಶ್ರೀ ದಾಕ್ಷಾಯಿಣಿ ಅವಾ" ಪ್ರಶಸ್ತಿಗೆ ಆನ್‌ಲೈನ್ ಅರ್ಜಿಯನ್ನು ಸಲ್ಲಿಸಬಹುದೆಂದು ತಿಳಿಸಿದ ದೇಶಮುಖ ಅವರು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 18–11–2024 ಎಂದಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಡಾ. ಪಲ್ಲವಿ ಪಾಟೀಲ ಸೇಡಂ–6360043349, ಶರಣು ಉದನೂರು–9481412585, ಮಾಲಾ ಕಣ್ಣಿ–9741299995, ಸುಮಂಗಲಾ ಚಕ್ರವರ್ತಿ–9448444422 ಇವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆಹಾರ ಸೇವನೆ ಆಸ್ಪತ್ರೆಗೆ ದಾಖಲಾದ ಬಿ.ಸಿ.ಎಂ. ವಸತಿ ನಿಲಯದ ಬಾಲಕಿಯರು

ಚಿಂಚೋಳಿ: ಕಳಪೆ ಗುಣಮಟ್ಟದ ಆಹಾರವನ್ನು ಸೇವಿಸಿ ಸುಮಾರು ಎಂಟು ಜನ ವಿದ್ಯಾರ್ಥಿನಿಯರು ಆಸ್ಪತ್ರೆಗೆ ದಾಖಲಾದ ಘಟನೆ ಚಿಂಚೋಳಿಯ ಚಂದಾಪುರ ಪಟ್ಟಣದಲ್ಲಿ ನಡೆದಿದೆ.

ಭಾನುವಾರ ರಾತ್ರಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಇಲಾಖೆಯ ವಸತಿ ನಿಲಯದಲ್ಲಿ ರಾತ್ರಿಯ ಊಟವನ್ನು ಸೇವಿಸಿದ ವಿದ್ಯಾರ್ಥಿಗಳಲ್ಲಿ ಕೆಲವೊಬ್ಬರಿಗೆ ವಾಂತಿ ಮತ್ತು ಭೇದಿಯುಂಟಾಗಿ ಚಂದಾಪುರ ಪಟ್ಟಣದ ಸರಕಾರಿ ಸಾರ್ವಜನಿಕ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು.

# "ಮಕ್ಕಳ ಕೈಯಲ್ಲಿ ತಲ್ವಾರ್ ಕೊಡಿ" ಎಂದ ಮರುಳಾರಾಧ್ಯಶ್ರೀ ವಿರುದ್ಧ ಪ್ರಕರಣ

ಕಲಬುರಗಿ,: ಮಕ್ಕಳ ಕೈಯಲ್ಲಿ ಪೆನ್ನು ನೀಡುವ ಬದಲು ತಲ್ವಾರು ಕೊಡಿ ಎಂದು ಮಾಶಾಳದ ಆಳಂದ ಮಠದ ಮರುಳಾರಾಧ್ಯ ಶಿವಾಚಾರ್ಯರು ಪ್ರಚೋದನಾತ್ಮಕ ಹೇಳಿಕೆ ನೀಡಿದ್ದಾರೆ. ಹೇಳಿಕೆ ನೀಡಿದ ಬೆನ್ನಲ್ಲೇ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಖಂಡನೆ ವ್ಯಕ್ತವಾದ ಹಿನ್ನೆಲೆ ಅಫಜಲಪುರ ಪೊಲೀಸ್ ಠಾಣೆಯಲ್ಲಿ ಸೆಕ್ಷನ್ 299 ಹಾಗೂ 353 ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಕಲಬುರಗಿ ಜಿಲ್ಲೆಯ ಅಫಜಲಪುರ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ವಕ್ಫ್ ಹಟಾವೋ ದೇಶ್ ಬಚಾವೋ ಹೋರಾಟದಲ್ಲಿ ಪಾಲ್ಗೊಂಡು ಹೇಳಿಕೆ ನೀಡಿದ ಶ್ರೀಗಳು, "ನಾವು ಜೀವ ಕೊಡೊದಕ್ಕೂ ರಡಿ ಇದ್ದೇವೆ, ಜೀವ ತೆಗೆಯುವುದಕ್ಕೂ ರೆಡಿ ಇದ್ದೇವೆ" ಎಂದರು.

"ಅಫಜಲಪುರದ ಯುವಕರ ಮನೆಗಳಲ್ಲಿ ತಲ್ವಾರುಗಳಿವೆ. ಯಾರು ಬರುತ್ತಾರೋ ಅವರನ್ನು ತಲ್ವಾರುಗಳಿಂದ ಕಡಿಯುತ್ತೇವೆ ಎನ್ನುತ್ತಿದ್ದಾರೆ. ಹಾಗಾಗಿ, ಇನ್ನು ಮುಂದೆ ನಾವು ಮಕ್ಕಳ ಕೈಯಲ್ಲಿ ಪೆನ್ನು ಕೊಡುವುದರ ಬದಲು ತಲ್ವಾರ್ ಕೊಡೋಣ" ಎಂದು ಕರೆ ನೀಡಿದರು.

"ವಕ್ಫ್ ಕಾಯಿದೆ ರದ್ದಾಗದಿದ್ದರೆ ನಾವು ಜೀವ ತೆಗೆಯಲೂ ಸಿದ್ದ. ಅಷ್ಟೇ ಅಲ್ಲ; ಜೀವ ಕೊಡಲೂ ಸಿದ್ಧರಿದ್ದೇವೆ" ಎಂದು ಕಿಡಿಕಾರಿದರು.

"ಕಲಬುರಗಿ ಜಿಲ್ಲೆಯಲ್ಲಿ 27 ಸಾವಿರ ಎಕರೆ ವಕ್ಫ್ ಆಸ್ತಿ ಇದೆ.ಭಾರತವನ್ನು ಪಾಕಿಸ್ತಾನಮಾಡುತ್ತೇವೆಎನ್ನುತ್ತಿದ್ದಾರೆ.ನೀವೇನಾದರೂ ಎಚ್ಚೆತ್ತುಕೊಳ್ಳದಿದ್ದರೆ ಭಾರತ ದೇಶವೇ ಇರೋದಿಲ್ಲ.

ಇಂತಹ ಪರಿಸ್ಥಿತಿ ಬರಬಾರದೆಂದು ನಾನು ಬಿಜೆಪಿಗೆ ಮತ ಹಾಕಿ ಎಂದಿದ್ದೆ. ಆಗ ಪೂಜ್ಯರು ರಾಜಕೀಯ ಮಾಡುತ್ತಿದ್ದಾರೆ ಎಂದು ಕೆಲವರು ಟೀಕಿಸಿದ್ದರು" ಎಂದು ಪ್ರಸ್ತಾಪಿಸಿದರು.

# ಡಿಕ್ಕಿ: ಬೈಕ್ ಸವಾರ ಸಾವು

ಕಲಬುರಗಿ,: ಗೂಡ್ಸ್ ವಾಹನ ಡಿಕ್ಕಿ ಹೊಡೆದು ಬೈಕ್ ಸವಾರನೊಬ್ಬ ಮೃತಪಟ್ಟು, ಇನ್ನೊಬ್ಬ ಗಾಯಗೊಂಡಿರುವ ಘಟನೆ ಕೆರಿ ಭೋಸಗಾ ಸಮೀಪದ ಕ್ರಿಸ್ಟೆಲ್ ಪ್ಯಾಲೇಸ್ ಹತ್ತಿರ ನಡೆದಿದೆ.

ಮೃತನನ್ನು ಶಾಂತಪ್ಪ ಅಲಿಯಾಸ್ ಶಾಂತಮಲ್ಲಪ್ಪ ಪಟ್ಟಣ ಎಂದು ಗುರುತಿಸಲಾಗಿದೆ. ಸುಧಾಕರ ಎಂಬಾತನಿಗೆ ಗಾಯಗಳಾಗಿವೆ.

ತೊಗರಿ ಬೆಳೆಗೆ ಸಿಂಪರಣೆ ಮಾಡುವ ಔಷಧಿ ಮತ್ತು ಮನೆಗೆ ಬೇಕಾದ ಸಾಮಗ್ರಿಗಳನ್ನು ತರಲೆಂದು ಶಾಂತಪ್ಪ ಅವರು ಕಲಬುರಗಿಗೆ ಹೋಗಿದ್ದರು. ಕ್ರಿಮಿನಾಶಕ ಔಷಧಿ ಮತ್ತು ಮನೆಗೆ ಬೇಕಾದ ಸಾಮಗ್ರಿ ತೆಗೆದುಕೊಂಡು ಮರಳಿ ಊರಿಗೆ ಬರುವಾಗ ಕಲಬುರಗಿಯಲ್ಲಿ ಸಿಕ್ಕ ಸುಧಾಕರ ಅವರನ್ನು ಕರೆದುಕೊಂಡು ಬರುತ್ತಿದ್ದರು. ಕೆರಿ ಭೋಸಗಾ ಹತ್ತಿರದ ಕ್ರಿಸ್ಟೆಲ್ ಪ್ಯಾಲೇಸ್ ಬಳಿ ಗೂಡ್ಸ್ ವಾಹನ ಡಿಕ್ಕಿ ಹೊಡೆದು ಇಬ್ಬರು ಗಾಯಗೊಂಡಿದ್ದರು. ಕಲಬುರಗಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

# ಕಿರಾಣಿ ಅಂಗಡಿ ಕಳ್ಳತನ: ಇಬ್ಬರು ಕುಖ್ಯಾತ ಕಳ್ಳರ ಬಂಧನ



ಕಲಬುರಗಿ: ಕಿರಾಣಿ ಅಂಗಡಿ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಕುಖ್ಯಾತ ಕಳ್ಳರನ್ನು ಬಂಧಿಸಿರುವ ರಾಘವೇಂದ್ರ ನಗರ ಪೊಲೀಸರು 1 ಲಕ್ಷ ರೂ.ಮೌಲ್ಯದ ಎಂಟ್ರಾಕ್ ಬೈಕ್, 7 ಲಕ್ಷ ರೂ.ಮೌಲ್ಯದ ಸ್ವಿಫ್ಟ್ ಡಿಸೈರ್ ಬಿಳಿ ಬಣ್ಣದ ಕಾರು, 5 ಸಾವಿರ, 13 ಸಾವಿರ, 19 ಸಾವಿರ ಮತ್ತು 20 ಸಾವಿರ ರೂ.ಮೌಲ್ಯದ ವಿವಿಧ ಕಂಪನಿಯ 4 ಮೊಬೈಲ್ ಹಾಗೂ 3 ಸಾವಿರ ರೂ.ನಗದು ಜಪ್ತಿ ಮಾಡಿದ್ದಾರೆ.

ಕಲಬುರಗಿಯ ಶಹಾಜಿಲಾನಿ ದರ್ಗಾ ಏರಿಯಾದ ಮಹ್ಮದ್ ಹನೀಫ್ ತಂದೆ ಅಕ್ಬರ್ ಪಟೇಲ್ (19) ಮತ್ತು ಕಾಳಗಿ ತಾಲ್ಲೂಕಿನ ಮಕರಂಬಾ ಗ್ರಾಮದ ಮಹಿಬೂಬ ಷಾ ತಂದೆ ನದಿಮ್ ಷಾ (48) ಎಂಬುವವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ನಗರದ ಎಂಎಸ್‌ಕೆಮಿಲ್ ಆರೀಫ್ ಕಾಲೋನಿಯ ಮಹ್ಮದ್ ತಜಮುಲ್ ಅವರು ಕಿರಾಣಿ ಅಂಗಡಿ ಕಳ್ಳತನವಾದ ಬಗ್ಗೆ ರಾಘವೇಂದ್ರ ನಗರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು. ಈ ದೂರಿನ ಅನ್ವಯ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ, ಡಿಸಿಪಿಗಳಾದ ಕನಿಕಾ ಸಿಕ್ರಿವಾಲ್, ಪ್ರವೀಣ್ ನಾಯಕ, ದಕ್ಷಿಣ ಉಪ ವಿಭಾಗದ ಎಸಿಪಿ ಭೂತೇಗೌಡ ಅವರ ಮಾರ್ಗದರ್ಶನದಲ್ಲಿ ರಾಘವೇಂದ್ರ ನಗರ ಪೊಲೀಸ್ ಠಾಣೆಯ ಪಿಐ ಕುಬೇರ ಎಸ್.ರಾಜಮಾನೆ ಅವರ ನೇತೃತ್ವದಲ್ಲಿ ಸಿಬ್ಬಂದಿಗಳಾದ ಮಲ್ಲನಗೌಡ, ಸಿಕ್ರೇಶ್ವರ, ಉಮೇಶ, ಮುಜಾಹಿದ್, ಕರಣಕುಮಾರ, ಆರೇಶ ಮತ್ತು ಆತ್ಮಕುಮಾರ ಅವರು ತನಿಖೆ ನಡೆಸಿ ಇಬ್ಬರು ಕುಖ್ಯಾತ ಕಳ್ಳರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

# ಮೂವರು ಬೈಕ್ ಕಳ್ಳರ ಬಂಧನ: 7 ಬೈಕ್, 9 ಮೊಬೈಲ್ ಜಪ್ತಿ



ಕಲಬುರಗಿ,: ಮೂವರು ಬೈಕ್ ಕಳ್ಳರನ್ನು ಬಂಧಿಸಿರುವ ರಾಘವೇಂದ್ರ ನಗರ ಪೊಲೀಸರು 3.45 ಲಕ್ಷ ರೂ.ಮೌಲ್ಯದ 7 ಬೈಕ್ ಮತ್ತು 9 ಮೊಬೈಲ್ ಜಪ್ತಿ ಮಾಡಿದ್ದಾರೆ.

ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ, ಡಿಸಿಪಿಗಳಾದ ಕನಿಕಾ ಸಿಕ್ರಿವಾಲ್, ಪ್ರವೀಣ್ ನಾಯಕ್, ದಕ್ಷಿಣ ಉಪ ವಿಭಾಗದ ಎಸಿಪಿ ಬೂತೆಗೌಡ ಅವರ ಮಾರ್ಗದರ್ಶನದಲ್ಲಿ ರಾಘವೇಂದ್ರ ನಗರ ಪೊಲೀಸ್ ಠಾಣೆಯ ಪಿಐ ಕುಬೇರ ಎಸ್.ರಾಜಮಾನೆ ಅವರ ನೇತೃತ್ವದಲ್ಲಿ ಸಿಬ್ಬಂದಿಗಳಾದ ಮಲ್ಲನಗೌಡ, ಸಿಕ್ರೇಶ್ವರ, ಉಮೇಶ, ಮುಜಾಹಿದ್, ಕರಣಕುಮಾರ, ಆರೇಶ ಮತ್ತು ಆತ್ಮಕುಮಾರ ಅವರು ತನಿಖೆ ನಡೆಸಿ ಬೈಕ್ ಕಳ್ಳರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಲ್ಲಿ ಯಶಸ್ವಿಯಾಗಿದ್ದಾರೆ

# ಪಿಂಚಣಿದಾರರ ಮನೆಬಾಗಿಲಿಗೆ ಜೀವಿತ ಪ್ರಮಾಣ ಪತ್ರ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಇಂಡಿಯಾ ಫೋಸ್ಟ ಫೇಮೆಂಟ್ ಬ್ಯಾಂಕ್, ಪಿಂಚಣಿ ಮತ್ತು ಪಿಂಚಣಿದಾರರ ಕಲ್ಯಾಣ ಇಲಾಖೆ ಹಾಗೂ ರಾಷ್ಟ್ರೀಯ ಮಾಹಿತಿ ಕೇಂದ್ರ ಇವರ ಸಹಯೋಗದೊಂದಿಗೆ ಕೇಂದ್ರ ಮತ್ತು ರಾಜ್ಯ ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆಯ ಪಿಂಚಣಿದಾರರು ಜೀವಿತ ಪ್ರಮಾಣ ಪತ್ರ ಸಲ್ಲಿಸುವ ಸಮಯದಲ್ಲಿ ಎದುರಿಸುತ್ತಿರುವ ತೊಂದರೆಗಳನ್ನು ತಪ್ಪಿಸಲು ಭಾರತೀಯ ಅಂಚೆ ಇಲಾಖೆ ಅಡಿಯಲ್ಲಿ ಪಿಂಚಣಿದಾರರಿಗೆ ಡಿಜಿಟಲ್ ಲೈಫ್ ಪ್ರಮಾಣ ಪತ್ರ ವಿತರಿಸುವ ವಿಶೇಷ ಅಭಿಯಾನ ಜಿಲ್ಲೆಯಲ್ಲಿ ನವೆಂಬರ್ 30ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ವಿಜಯಪುರ ಅಂಚೆ ಇಲಾಖೆ ಅಧೀಕ್ಷಕರು ತಿಳಿಸಿದ್ದಾರೆ.

ಪಿಂಚಣಿದಾರರ ಅನುಕೂಲಕ್ಕಾಗಿ ಫೋಸ್ಟ್ಮನ್ ಅವರು ಅವರ ಮನೆ ಬಾಗಿಲಿಗೆ ತೆರಳಿ ಆಧಾರ್ ಮತ್ತು ಪಿಂಚಣಿ ವಿವರಗಳನ್ನು ಬಳಸಿಕೊಂಡು ಡಿಜಿಟಲ್ ಜೀವಿತ ಪ್ರಮಾಣ ಪತ್ರ ನೀಡಲು ಕ್ರಮವಹಿಸಲಾಗುತ್ತಿದೆ. ಪಿಂಚಣಿದಾರರು ತಮ್ಮ ಹತ್ತಿರದ ಅಂಚೆ ಕಚೇರಿಗೆ ಭೇಟಿ ನೀಡಿ ಅಥವಾ ತಮ್ಮ ವ್ಯಾಪ್ತಿಯ ಪೋಸ್ಟಮನ್ ಅವರನ್ನು ಸಂಪರ್ಕಿಸಿ ಮನೆಯಲ್ಲಿಯೇ ಕುಳಿತು ಅಗತ್ಯ ದಾಖಲೆ ನೀಡಿ, ತಮ್ಮ ಜೀವಿತ ಪ್ರಮಾಣ ಪತ್ರ ಪಡೆದುಕೊಳ್ಳಬಹುದಾಗಿದೆ.

ಜಿಲ್ಲೆಯಲ್ಲಿ ಈಗಾಗಲೇ ವಿವಿಧೆಡೆ ಶಿಬಿರ ಯಶಸ್ವಿಯಾಗಿ ನಡೆದಿದ್ದು, ನವೆಂಬರ್ 16 ರಂದು ಸಿಂದಗಿ ಉಪ ಅಂಚೆ ಕಚೇರಿ ಮತ್ತು ನವೆಂಬರ್ 25ರಂದು ಇಂಡಿ ಉಪ ಅಂಚೆ ಕಚೇರಿ ವ್ಯಾಪ್ತಿಯಲ್ಲಿ ಏರ್ಪಡಿಸಲಾಗಿದ್ದು, ಪಿಂಚಣಿದಾರರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಂ.ಎ ಪತ್ರಿಕೋದ್ಯಮ: ಉಳಿಕೆ ಸೀಟು ಪ್ರವೇಶಕ್ಕೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ 2024–25ನೆಯ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ (ಎಂಎ), ವ್ಯಾಲ್ಯು ಆಡೆಡ್ ಡಿಪ್ಲೋಮಾ ಹಾಗೂ ವ್ಯಾಲ್ಯು ಆಡೆಡ್ ಅಡ್ವಾನ್ಸ್ ಡಿಪ್ಲೋಮಾ ಮತ್ತು ಗ್ರಾಫಿಕ್ ಡಿಸೈನಿಂಗ್ ಸರ್ಟಿಫಿಕೇಟ್ ಕೋರ್ಸ್ಗಳ ಪ್ರಥಮ ವರ್ಷದ ಉಳಿಕೆ ಸೀಟುಗಳ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಯುಯುಸಿಎಂಎಸ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

ಪತ್ರಿಕೋದ್ಯಮ ವಿಭಾಗದ ಎಂಎ ಕೋರ್ಸ್ನ ಉಳಿಕೆ ಸೀಟುಗಳಿಗೆ ಪ್ರವೇಶ ಪಡೆಯಲು ಈಗಾಗಲೇ ಯುಯುಸಿಎಂಎಸ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಇಲ್ಲಿಯ ವರೆಗೆ ಪ್ರವೇಶ ಪಡೆಯದೇ ಇರುವವರು ಮತ್ತು ಈಗಾಗಲೇ ಅರ್ಜಿ ಸಲ್ಲಿಸದೇ ಇರುವವರು ಸಹ ಅರ್ಜಿ ಸಲ್ಲಿಸಲು ನವೆಂಬರ್ 15 ಕೊನೆಯ ದಿನವಾಗಿದ್ದು ಯುಯುಸಿಎಂಎಸ್ https://uucms.karnataka.gov.in/Login/Index ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಿದ ನಂತರ ನೇರವಾಗಿ ಪತ್ರಿಕೋದ್ಯಮ ವಿಭಾಗಕ್ಕೆ ಭೇಟಿ ನೀಡಿ ಪ್ರವೇಶ ಪಡೆಯಬಹುದಾಗಿದೆ ಎಂದು ವಿವಿ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ 9611488205 ಮೊಬೈಲ್ ಸಂಖ್ಯೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ದರಬಾರ ಕಾಲೇಜಿನಲ್ಲಿ ವಿಶ್ವ ಲೆಕ್ಕಶಾಸ್ತ್ರ ದಿನಾಚರಣೆ




ವಿಜಯಪುರ, : ನಗರದ ವಿ.ಭ. ದರಬಾರ ಸಂಯುಕ್ತ ಪದವಿ ಪೂರ್ವಕಾಲೇಜಿನ ವಿತ್ತ ವಿಹಾರ ಕಾಮರ್ಸ್ ಕ್ಲಬ್ ವತಿಯಿಂದ ಅಂತಾರಾಷ್ಟ್ರೀಯ ಲೆಕ್ಕಶಾಸ್ತ್ರ ದಿನಾಚರಣೆ ಆಚರಿಸಲಾಯಿತು.

ಇದೇ ಸಂದರ್ಭದಲ್ಲಿ ವಾಣಿಜ್ಯ ಶಾಸ್ತ್ರದ ವಿಶ್ರಾಂತ ಉಪನ್ಯಾಸಕ ಬಿ.ಎಚ್. ಕುಲಕರ್ಣಿ ಅವರಿಗೆ ವಿದ್ಯಾರ್ಥಿಗಳಿಂದ ಅಭಿನಂದನ ಕಾರ್ಯಕ್ರಮ ಜರುಗಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಬಿ.ಎಚ್. ಕುಲಕರ್ಣಿ ಅವರು ಲೆಕ್ಕಶಾಸ್ತ್ರದ ಮಹತ್ವವನ್ನು ತಿಳಿಸಿ ತಮ್ಮ ವೃತ್ತಿ ಜೀವನದ ಅನುಭವಗಳನ್ನು ಹಂಚಿಕೊಂಡರು.

ಅಧ್ಯಕ್ಷತೆ ವಹಿಸಿದ್ದ ವಿದ್ಯಾವರ್ಧಕ ಸಂಘದ ಸಮನ್ವಯಾಧಿಕಾರಿ ಡಾ. ವ್ಹಿ.ಬಿ. ಗ್ರಾಮಪುರೋಹಿತ ಲೆಕ್ಕಶಾಸ್ತ್ರದ ವಿದ್ಯಾರ್ಥಿಗಳಿಗೆ ಪುಸ್ತಕ ಜ್ಞಾನದ ಜೊತೆಗೆ ವ್ಯಾವಹಾರಿಕ ಜ್ಞಾನವೂ ಅವಶ್ಯವೆಂದು ಹೇಳಿದರು.

ಇದೇ ಸಂದರ್ಭದಲ್ಲಿ ಅರ್ಥಶಾಸ್ತ್ರದ ಹಿರಿಯ ಉಪನ್ಯಾಸಕ ನಾಗರಾಜ ಎ. ಮಾತನಾಡಿದರು.

ಕಾಮರ್ಸ್ ಕ್ಲಬ್ ಸಂಚಾಲಕ 'ಜಯತೀರ್ಥ ಛಪ್ಪರ ಹಾಗೂ ನೂರಾರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಹಜರತ್ ಟಿಪ್ಪು ಸುಲ್ತಾನ್ 275ನೇ ಜಯಂತಿ ಆಚರಣೆ




ಕೆಂಭಾವಿ: ಪಟ್ಟಣದ ಟಿಪ್ಪು ಸುಲ್ತಾನ ವೃತ್ತದಲ್ಲಿ ಟಿಪ್ಪುಸುಲ್ತಾನ್ ಸಂಯುಕ್ತ ರಂಗ ವತಿಯಿಂದ ಹಜರತ್ ಟಿಪ್ಪು ಸುಲ್ತಾನ ರವರ 275ನೇ ಜಯಂತೋತ್ಸವ ಕಾರ್ಯಕ್ರಮವನ್ನು ಸಿಹಿ ಹಂಚುವುದರ ಮೂಲಕ ಆಚರಿಸಲಾಯಿತು.

ನಂತರ ಮಾತನಾಡಿದ ಕೆಂಭಾವಿ ಟಿಪ್ಪು ಸುಲ್ತಾನ ಸಂಘದ ಅಧ್ಯಕ್ಷರಾದ ಶಫೀಕ್ ದಫೇದಾರ್ ದೇಶ ಕಂಡ ಅಪ್ರತಿಮವೀರ ಸೇನಾನಿ, ದೇಶಪ್ರೇಮಿ, ವೀರ ಸ್ವಾತಂತ್ರ್ಯ ಹೋರಾಟಗಾರ ಮತ್ತು ಪರಧರ್ಮ ಸಹಿಷ್ಣುತೆಯ ಸೌಹಾರ್ದತೆಯ ಧೀರ ಟಿಪ್ಪು ಸುಲ್ತಾನ, ದಕ್ಷಿಣ ಭಾರತದ ಮೈಸೂರು ರಾಜ್ಯದ ಮುಸಲ್ಮಾನ ದೊರೆ, ಬ್ರಿಟಿಷರ ವಿರುದ್ಧ ಹೋರಾಡಿದ ಸ್ವಾತಂತ್ರ್ಯ ಸೇನಾನಿ ಟಿಪ್ಪು ಎಂದರು.

ವೀರ ಪರಾಕ್ರಮಿ ಮೈಸೂರು ಹುಲಿ ಎಂದು ಪ್ರಖ್ಯಾತನಾದ ಸುಲ್ತಾನ್ ಫತೇಹ್ ಅಲಿ ಸಾಹಬ್ ಟಿಪ್ಪು ಜಯಂತಿ ಪಟ್ಟಣದಲ್ಲಿ ಸಂಭ್ರಮದಿಂದ ಆಚರಣೆ ಮಾಡಬೇಕೆಂದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಶಹಪೂರಿನ ಯುವ ಮುಖಂಡ ನಯುಮ್ ಅಫಗಾನ ಮಾತನಾಡಿ ದೇಶದ ನೆಲ,ಜಲ,ನಾಡು, ರಕ್ಷಣೆಗಾಗಿ ತನ್ನ ಹೆತ್ತ ಮಕ್ಕಳನ್ನೇ ಒತ್ತೆಯಿಟ್ಟು ಬ್ರಿಟಿಷರ ವಿರುದ್ಧ ಹೋರಾಡಿದ ಸ್ವತಂತ್ರ ಸೇನಾನಿಯಾಗಿದ್ದಾರೆ ಅವರ ಸಾಹಸ ಧೈರ್ಯ ಶೌರ್ಯ ಪರಾಕ್ರಮವನ್ನು ಮೆಚ್ಚುವಂತದ್ದು ಇಂದಿನ ಪೀಳಿಗೆಗೆ ಅವರ ಆದರ್ಶಗಳು ಮಾದರಿಯಾಗಬೇಕು, ತಮ್ಮ ಆಡಳಿತದ ಅವಧಿಯಲ್ಲಿ ಜನಪರವಾದ ಕಾರ್ಯಕ್ರಮವನ್ನು ನೀಡಿದ ಶ್ರೇಯಸ್ಸು, ಟಿಪ್ಪು ಸುಲ್ತಾನ ರದಾಗಿದೆ. ಸರ್ವಧರ್ಮದ ಶ್ರೇಷ್ಠತೆಗಾಗಿ ಬದುಕಿದ ಧೀಮಂತ ನಾಯಕ ಎಂದು ಹೇಳಿದರು.

ಟಿಪ್ಪು ಸುಲ್ತಾನ ಭಾವಚಿತ್ರಕ್ಕೆ ಮಹಿಪಾಲ್ ರೆಡ್ಡಿ ದಿಗ್ಗಾವಿ ಮಾಲಾರ್ಪಣೆ ಮಾಡಿದರು. ಮಾಜಿ ಜಿಲ್ಲಾ ಪಂಚಾಯಿತ ಅಧ್ಯಕ್ಷರಾದ ಸಿದ್ದನಗೌಡ ಪೊಲೀಸ್ ಪಾಟೀಲ ಧ್ವಜಾರೋಹಣ ನೆರವೇರಿಸಿದರು ಈ ಸಂದರ್ಭದಲ್ಲಿ, ಖಾಜಾ ಪಟೇಲ್ ಕಾಚೂರು, ಸಂಜೀವ್ ರಾವ್ ಕುಲಕರ್ಣಿ, ಕೆ.ಡಿ.ನಾಸಿ,ಮೈಬೂಬ್ ಸಾಬ್ ದಫೇದಾರ, ಸೈಯದ್ ಹುಸೇನ್ ಮೌಲಾನ, ಗಾಲಿಬ್ ಖಾನ್ ಇನಾಮ್ದಾರ್, ರಫೀಕ್ ವಡಿಕೇರಿ ಬಿ.ಜೆಡ್,ನಾಲ್ತಾವಾಡ ,ರಫೀಕ್ ಖಾಜಿ. ಆದಮ ನಾಸೀ,ರಜಾಕ್ ಸಾಸನೂರ,ಬಿ. ಕೆ.ನಾಶಿಅಲ್ಲಾಬಕ್ಷಹುಳಬುತ್ತಿ , ನಯೂಮ್ ಖಾಜಿ, ಹನೀಫ್ ಸಾಸನೂರ್, ಎಸ್.ಕೆ.ಮಹ್ಮದ ಖಾಜಿ, ಜಿಲಾನಿ ನಾಶಿ, ಬಾಬಾ ತಾಳಿಕೋಟಿ, ಸೇರಿದಂತೆ ಇತರಿದ್ದರು.

# ಮಕ್ಕಳ ದಂತ ತಪಾಸಣೆ

**ಕೆಂಭಾವಿ:** ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದ ವತಿಯಿಂದ ದಂತ ವೈದ್ಯರಾದ ಡಾ|| ಅಶ್ವಿನಿ ರವರು ಬಾಲಕಿಯರ ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿನಿಯರಿಗೆ ದಂತಗಳ ಸಂರಕ್ಷಣೆ ಕುರಿತು ವಿಶೇಷ ಉಪನ್ಯಾಸ ನೀಡಿ ನಂತರ ಶಾಲೆಯ ಎಲ್ಲಾ ಮಕ್ಕಳ ದಂತಗಳನ್ನು ತಪಾಸಣೆ ಮಾಡಿ ಸೂಕ್ತ ಸಲಹೆಗಳನ್ನು ನೀಡಿದರು,

ದಂತ ನೋವು ಕಂಡ ಕೂಡಲೇ ದಂತ ವೈದ್ಯರನ್ನು ಕಂಡು ಸೂಕ್ತ ಸಲಹೆ ಮತ್ತು ಚಿಕಿತ್ಸೆ ಪಡೆಯಬೇಕು ಎಂಬ ಕಿವಿ ಮಾಡು ಹೇಳಿದರು. ಕಾರ್ಯಕ್ರಮದಲ್ಲಿ ಶಾಲಾ ಮುಖ್ಯಗುರು ಎಂ.ಬಿ ಪಾಟೀಲ, ಕ್ಷೇತ್ರ ಆರೋಗ್ಯಾಧಿಕಾರಿ ಗುಲಜಾನ ಬೇಗಂ, ರೇವಣಸಿದ್ದಪ್ಪ, ಫಾತೀಮಾ, ಶಿಕ್ಷಕರಾದ ಯಮನೇಶ ಯಾಳಗಿ ಸೇರಿದಂತೆ ಶಾಲಾ ಸಿಬ್ಬಂದಿ ವರ್ಗದವರಿದ್ದರು.

# ಟಿಪ್ಪು ಸುಲ್ತಾನ್ ಜಯಂತಿ ಸರ್ಕಾರವೇ ಆಚರಿಸಲಿ : ಮುಶ್ರೀಫ್

■ ಉದಯರಶ್ಮಿ ದಿನಪತ್ರಿಕೆ



ಬಿಜಾಪುರ: ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬ್ರಿಟಿಷರ ಎದೆ ನಡುಗಿಸಿದ, ಸಮ ಸಮಾಜಕ್ಕೆ ಶ್ರಮಿಸಿದ ಮೈಸೂರು ಹುಲಿ ಟಿಪ್ಪು ಸುಲ್ತಾನ್ ಅವರ ಜಯಂತಿಯನ್ನು ಮುಂಬರುವ ದಿನಗಳಲ್ಲಿ ರಾಜ್ಯ ಸರ್ಕಾರದ ವತಿಯಿಂದ ಆಚರಿಸಬೇಕು ಎಂದು ಕಾಂಗ್ರೇಸ್ ಪಕ್ಷದ ಜಿಲ್ಲಾ ಮುಖಂಡ ಅಬ್ದುಲ್‌ಹಮೀದ್ ಮುಶ್ರೀಫ್ ಮುಖ್ಯಮಂತ್ರಿ ಸಿದ್ಧರಾಮಯ್ಯ ಹಾಗೂ ಸಚಿವ ಎಂ.ಬಿ.ಪಾಟೀಲ ಅವರಿಗೆ ಒತ್ತಾಯಿಸಿದರು.

ನಗರದ ಟಿಪ್ಪು ಸುಲ್ತಾನ್ ವೃತ್ತದಲ್ಲಿ ಭಾನುವಾರದಂದು ಟಿಎಸ್‌ಎಸ್ ಸಂಘಟನೆಯ ವತಿಯಿಂದ ನಡೆದ ಮೈಸೂರು ಹುಲಿ ಟಿಪ್ಪು ಸುಲ್ತಾನ್ ಅವರ ಜಯಂತಿ ಕಾರ್ಯಕ್ರಮದಲ್ಲಿ ಟಿಪ್ಪು ಸುಲ್ತಾನ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿ, ದೇಶದಲ್ಲಿ ಈ ಹಿಂದೆ ಟಿಪ್ಪು ಸುಲ್ತಾನ್ ಅವರನ್ನು ಕಂಡರೆ ಬ್ರಿಟೀಷರು ಅಂಜುತ್ತಿದ್ದರು. ಆದರೆ ಇಂದು ಟಿಪ್ಪು ಸುಲ್ತಾನ್‌ಗೆ ಬಿಜೆಪಿ ಪಕ್ಷದವರು ಹೆದರುತ್ತಿದ್ದಾರೆ. ಯಾರೇ ಏನೆ ಅಂದರೂ ಟಿಪ್ಪು ಸುಲ್ತಾನ್ ಜಯಂತಿ ನಿಲ್ಲುವದಿಲ್ಲ ಎಂದು ನುಡಿದರು.

ಅಹಿಂದ್ ಮುಖಂಡ ಎಸ್.ಎಂ. ಪಾಟೀಲ ಗಣಿಹಾರ ಮಾತನಾಡಿ, ಸಮಾಜದಲ್ಲಿ ಸಮಾನತೆಗೆ ಹೋರಾಡಿದ ಮೈಸೂರು ಹುಲಿ ಟಿಪ್ಪು ಸುಲ್ತಾನ್ ಅವರ ವಿರುದ್ಧ ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಕಿಡಿಕಾರಿದರು.

ಕರವೇ ರಾಜ್ಯ ಮುಖಂಡ ಎಂ.ಸಿ. ಮುಲ್ಲಾ, ಟಿಎಸ್‌ಎಸ್ ಸಂಘಟನೆಯ ಅಧ್ಯಕ್ಷ ಇರ್ಫಾನ್ ಶೇಖ ಮಾತನಾಡಿ, ಮೈಸೂರು ಹುಲಿ ಟಿಪ್ಪು ಸುಲ್ತಾನ್ ಅವರ ತ್ಯಾಗ, ಬಲಿದಾನ ಮರೆಯಲಾಗದು. ಇಂತಹ ಮಹಾನ್ ನಾಯಕರ ಕುರಿತು ಹಗುರವಾಗಿ ಮಾತನಾಡಿದ ನಗರ ಶಾಸಕ ಬಸನಗೌಡ ಯತ್ನಾಳ ವಿರುದ್ಧ ಕಿಡಿಕಾರಿದರು.

ಹಾಸಿಂಪೀರ ದರ್ಗಾದ ವಂಶಸ್ಥ ಜೈನುಲಾಬ್ದಿನ್ ಪೀರಾ, ಸಜ್ಜಾದೆ ಪೀರಾ ಮುಶ್ರೀಫ್, ಬಿಡಿಎ ಅಧ್ಯಕ್ಷ ಕನ್ನಾನ್ ಮುಶ್ರೀಫ್, ಮಹಾನಗರ ಪಾಲಿಕೆಯ ಸದಸ್ಯರಾದ ಕೈಸರ್ ಇನಾಮದಾರ, ಅನ್ವರ ಮನಗೂಳಿ, ಅಲ್ಲಾಭಕ್ಷ ಬಡೇಗಾರ, ಪಾಲಿಕೆಯ ಮಾಜಿ ಸದಸ್ಯ ಅಬ್ದುಲ್‌ರಜಾಕ್ ಹೋರ್ತಿ, ಅತಾವುಲ್ಲಾ ದ್ರಾಕ್ಷಿ, ಮಹಾದೇವ ರಾವಜಿ, ಅಪ್ಪು ಪೂಜಾರಿ, ಅಲ್ತಾಫ್ ಇಟಗಿ, ಬಂದೇನವಾಜ್ ಬೀಳಗಿ, ಮಲ್ಲು ತೋರವಿ, ವಕೀಲರಾದ ಸಮದ್ ಸುತಾರ, ಗೌಸ್ ಹವಾಲ್ದಾರ್, ಹಸನ್ ಪಟೇಲ್, ಮುಖಂಡರಾದ ಜೈನುದ್ದೀನ್ ಗುಂಡಬಾವಡಿ, ಅಲ್ತಾಫ್ ಲಕ್ಕುಂಡಿ, ಇಮಾಮ್ ಮುಲ್ಲಾ, ಹಾಫಿಜ್ ಸಿದ್ಧಿಕಿ, ವಸಂತ ಹೊನಮೊಡೆ, ಈರಪ್ಪ ಕುಂಬಾರ, ಸಂಘಟನೆಯ ಇಂಡಿ ತಾಲೂಕು ಮುಖಂಡ ಅಲ್ಲಾಭಕ್ಷ ಘೋರೆ, ಹಾಜಿ ನದಾಫ್, ಅನ್ನಾನ್ ಶೇಖ, ಅನ್ವರ ಜಮಖಂಡಿ, ಅಗಸಬಾಳ, ಮುನ್ನಾ ಮುಲ್ಲಾ ಸೇರಿದಂತೆ ಟಿಎಸ್‌ಎಸ್ ಸಂಘಟನೆಯ ಜಿಲ್ಲಾ ಹಾಗೂ ತಾಲೂಕು ಘಟಕದ ಪದಾಧಿಕಾರಿಗಳು, ಟಿಪ್ಪು ಅಭಿಮಾನಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ದೌರ್ಜನ್ಯಕ್ಕೆ ಒಳಗಾದ, ನೊಂದ ಯಾವುದೇ ಸಮುದಾಯದ ವ್ಯಕ್ತಿಗಳ ಕಾನೂನು ನೆರವಿಗೆ ಸಹಕಾರ

ಯಾದಗಿರಿ : ರಾಷ್ಟ್ರೀಯ ಕಾನೂನು ಸೇವೆಗಳ ದಿನವನ್ನು ದೇಶ್ಯಾದ್ಯಂತ ಆಚರಿಸಲಾಗುತ್ತಿದೆ, ಮಹಿಳೆಯರು, ಮಕ್ಕಳು ಹಾಗೂ ತುಳಿತಕ್ಕೆ ಒಳಗಾದ ಸಮೂದಾಯಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರು ಕಾನೂನು ನೆರವು ಪಡೆಯಬಹುದಾಗಿದೆ, ದೌರ್ಜನ್ಯ ಒಳಗಾದ ಅಥವಾ ನೊಂದ ಯಾವುದೇ ಸಮೂದಾಯ ವ್ಯಕ್ತಿಗಳು ಕಾನೂನು ನೆರವು ಪಡೆಯಬಹುದಾಗಿದೆ ಎಂದು ಯಾದಗಿರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀ ಮರಿಯಪ್ಪ ಅವರು ಹೇಳಿದರು.




ಯಾದಗಿರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಯಾದಗಿರಿ ಮಹಿಳಾ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ 2024ರ ನವೆಂಬದಲ್ಲಿ ಇತ್ತೀಚಿಗೆ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಯಾದಗಿರಿಯಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮದಲ್ಲಿ ಸಸಿಗೆ ನೀರುಣಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.

ಭಾರತವು ಪ್ರತಿ ವರ್ಷ ನವೆಂಬರ್ 9 ರಂದು ರಾಷ್ಟ್ರೀಯ ಕಾನೂನು ಸೇವೆಗಳ ದಿನವನ್ನು ಆಚರಿಸುತ್ತದೆ. ಐಜಂಚಿಟ ಜಡಿತುಳಿಥ ಂಥಿಣ 1987 ರಲ್ಲಿ ಜಾರಿಗೆ ಬಂದಿದ್ದು 1993 ರಿಂದ ರಾಷ್ಟ್ರೀಯ ಕಾನೂನು ಸೇವೆಗಳ ದಿನವನ್ನು ಆಚರಿಸುತ್ತ ಬರಲಾಗುತ್ತಿದೆ. ಉಚಿತ ಕಾನೂನು ಅರಿವು ಮತ್ತು ನೆರವಿನ ಲಭ್ಯತೆಯ ಬಗ್ಗೆ ಜನರಿಗೆ ತಿಳಿಸಲು ರಾಷ್ಟ್ರೀಯ ಕಾನೂನು ಸೇವೆಗಳ ದಿನವನ್ನು ದೇಶ್ಯಾದ್ಯಂತ ಆಚರಿಸಲಾಗುತ್ತಿದೆ. ಮಹಿಳೆಯರು, ಮಕ್ಕಳು ಹಾಗೂ ತುಳಿತಕ್ಕೆ ಒಳಗಾದ ಸಮೂದಾಯಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರು ಕಾನೂನು ನೆರವು ಪಡೆಯಬಹುದಾಗಿದೆ. ದೌರ್ಜನ್ಯ ಒಳಗಾದ ಅಥವಾ ನೊಂದ ಯಾವುದೇ ಸಮೂದಾಯ ವ್ಯಕ್ತಿಗಳು ಕಾನೂನು ನೆರವು ಪಡೆಯಬಹುದಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ಓಂಐಖಂ), ರಾಜ್ಯ ಮಟ್ಟದಲ್ಲಿ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಗಳು (ಖಐಖಂ)ಗಳು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ (ಆಐಖಂಖ) ಮತ್ತು ತಾಲೂಕು ಮಟ್ಟದಲ್ಲಿ ತಾಲೂಕು ಕಾನೂನು ಸೇವಾ ಸಮಿತಿಗಳು (ಖಿಐಖಅಖ) ಕಾನೂನು ಅರಿವು ಮತ್ತು ನೆರವು ನೀಡಲು ಕೆಲಸ ಮಾಡುತ್ತಿದೆ ಎಂದು ತಿಳಿಸಿದರು.

ಯಾದಗಿರಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ರಾಜ್ಯ ಶಾಸ್ತ್ರ ಉಪನ್ಯಾಸಕರಾದ ಡಾ.ಉದಯಕುಮಾರ ದೊಡ್ಡಮನಿ ಅವರು ಮಾತನಾಡಿದರು. ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ ಸಮಾನ್ಯ ನಾಗರಿಕರು ಕೂಡಾ ಸಂವಿಧಾನ ನೀಡಿದ ತಮ್ಮ ಹಕ್ಕುಗಳನ್ನು ಮತ್ತು ಕರ್ತವ್ಯಗಳ ಬಗ್ಗೆ ಮಾಹಿತಿ ತಿಳಿದಿರಬೇಕು. ಪ್ರತಿಯೊಬ್ಬರು ಹಕ್ಕುಗಳು ಪಡೆಯಬೇಕು ಅದರಂತೆ ಕರ್ತವ್ಯಗಳನ್ನು ಕೂಡಾ ಪಾಲನೆ ಮಾಡಬೇಕು ಎಂದು ಹೇಳಿದರು.

ಯಾದಗಿರಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಡಾ. ಹರೀಶ್ ರಾಠೋಡ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆಯ ಎಲ್ಲರಿಗೂ ಕಾನೂನಿನ ಮೂಲಕ ದೊರೆಯಬೇಕಾದ ಸೌಲಭ್ಯಗಳನ್ನು ದೊರಕಿಸಿಕೊಡಲು ಕಾನೂನು ಸೇವಾ ಪ್ರಾಧಿಕಾರ ಶ್ರಮಿಸುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾನೂನು ಸೇವೆಗಳ ಸಿಬ್ಬಂದಿಗಳು, ಶಿಕ್ಷಕರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

# ಸೇವಾ ನಿಯಮ ಉಲ್ಲಂಘನೆ ಆರೋಪ: ಕೇರಳದ ಇಬ್ಬರು ಖಂಖ ಅಧಿಕಾರಿಗಳು ಅಮಾನತು

ತಿರುವನಂತಪುರಂ(ಕೇರಳ): ಸೇವಾ ನಿಯಮ ಉಲ್ಲಂಘಿಸಿದ ಆರೋಪದಡಿ ಇಬ್ಬರು ಐಎಎಸ್ ಅಧಿಕಾರಿಗಳನ್ನು ಅಮಾನತುಗೊಳಿಸಿ ಕೇರಳ ಸರ್ಕಾರ ಆದೇಶ ಹೊರಡಿಸಿದೆ. ಕೆ. ಗೋಪಾಲಕೃಷ್ಣನ್ ಮತ್ತು ಎನ್.ಪ್ರಶಾಂತ್ ಅಮಾನತಾದ ಅಧಿಕಾರಿಗಳು.



ಅಮಾನತು ಮಾಡಿದ್ದೇಕೆ?: ಧರ್ಮದ ಆಧಾರದ ಮೇಲೆ ಸರ್ಕಾರಿ ಅಧಿಕಾರಿಗಳ ವಾಪ್ ಗ್ರೂಪ್ ರಚಿಸಿದ ಆರೋಪದ ಮೇಲೆ ಗೋಪಾಲಕೃಷ್ಣ ಅವರನ್ನೂ, ಸಾಮಾಜಿಕ ಜಾಲತಾಣದಲ್ಲಿ ಹಿರಿಯ ಐಎಎಸ್ ಅಧಿಕಾರಿಯನ್ನು ಸಾರ್ವಜನಿಕವಾಗಿ ಟೀಕಿಸಿದ ಆರೋಪದಡಿ ಪ್ರಶಾಂತ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದೆ.

ಸೋಮವಾರ ತಡರಾತ್ರಿ ಈ ಅಮಾನತು ಆದೇಶ ಹೊರಡಿಸಲಾಗಿದೆ. ಅಖಿಲ ಭಾರತ ಸೇವಾ ನಿಯಮ 1968ರ ಹಲವು ಸೆಕ್ಷನ್‌ಗಳಡಿ ಇಬ್ಬರು ಅಧಿಕಾರಿಗಳು ಅಶಿಸ್ತು ತೋರಿ, ನಿಯಮ ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ ಎಂದು ಸರ್ಕಾರ ತಿಳಿಸಿದೆ.

ನನ್ನ ಫೋನ್ ಹ್ಯಾಕ್ ಆಗಿದೆ ಎಂದು ಸ್ಪಷ್ಟನೆ ನೀಡಿರುವ ಕೈಗಾರಿಕಾ ಇಲಾಖೆಯ ನಿರ್ದೇಶಕರಾಗಿದ್ದ ಗೋಪಾಲಕೃಷ್ಣ ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸಿದ್ದಾರೆ.

ಆದರೆ ತನಿಖೆಯಲ್ಲಿ ಗೋಪಾಲಕೃಷ್ಣ ಅವರ ಮೊಬೈಲ್ ಫೋನ್ ಹ್ಯಾಕ್ ಆಗಿರುವ ಕುರಿತು ಯಾವುದೇ ಸಾಕ್ಷ್ಯಗಳು ಲಭ್ಯವಾಗಿಲ್ಲ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಸರದ ಮುರುಳೀಧರನ್ ಅಮಾನತು ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ವಿಧಿವಿಜ್ಞಾನ ಪರೀಕ್ಷೆಗೆ ಮುನ್ನ ಅಧಿಕಾರಿಯೇ ಸ್ವತಃ ಅನೇಕ ಬಾರಿ ಮೊಬೈಲ್ ಫೋನ್ ರಿಸೆಟ್ ಮಾಡಿರುವುದು ಕಂಡುಬಂದಿದೆ. ವಾಟ್ಸ್[illegible]ಪ್ ಗ್ರೂಪ್ ರಚಿಸುವ ಮೂಲಕ ರಾಜ್ಯದ ಅಖಿಲ ಭಾರತ ಸೇವೆಗಳ ಅಧಿಕಾರಿಗಳ ನಡುವೆ ಭಿನ್ನಾಭಿಪ್ರಾಯ ಸೃಷ್ಟಿಸಿ ಒಗ್ಗಟ್ಟು ಮುರಿಯುವ ದುರುದ್ದೇಶವನ್ನು ಗೋಪಾಲಕೃಷ್ಣ ಹೊಂದಿದ್ದಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೃಷಿ ಇಲಾಖೆ ವಿಶೇಷ ಕಾರ್ಯದರ್ಶಿ ಎನ್.ಪ್ರಶಾಂತ್ ಅವರು ಸಾಮಾಜಿಕ ಜಾಲತಾಣದಲ್ಲಿ ಹಣಕಾಸು ವಿಭಾಗದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎ.ಜಯತಿಲಕ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದು, ಅವರನ್ನು ಅಮಾನತು ಮಾಡಲಾಗಿದೆ ಎಂದು ಸರ್ಕಾರ ಹೇಳಿದೆ.

# ಇತಿಹಾಸದಲ್ಲಿ ಅಮರ ವೀರವನಿತೆ ಒನಕೆ ಓಬವ್ವ:ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ್

ಯಾದಗಿರಿ : ವೀರವನಿತೆ ಒನಕೆ ಓಬವ್ವ ಅವರು ಸ್ವಾಮಿನಿಷ್ಠೆ ಹಾಗೂ ಸಮಯಪ್ರಜ್ಞೆ ಮೂಲಕ ಚಿತ್ರದುರ್ಗದ ಕೋಟೆ ರಕ್ಷಣೆಗೆ ತೋರಿದ ಧೈರ್ಯ–ಸಾಹಸ ಸ್ಮರಣೀಯವಾಗಿದೆ ಎಂದು ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನಗರಸಭೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಇಂದು ಇಲ್ಲಿನ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ "ಒನಕೆ ಓಬವ್ವ ಜಯಂತಿ" ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಸಾಮಾನ್ಯ ಗೃಹಿಣಿ ಎನಿಸಿಕೊಂಡಿದ್ದ ಒನಕೆ ಓಬವ್ವ, ಇತಿಹಾಸದ ಪುಟಗಳಲ್ಲಿ ಆವರಿಸಿಕೊಂಡಿದ್ದೆ ರೋಮಾಂಚಕ ಕಥನ. ಚಲವಾದಿ ಸಮುದಾಯದ ಓಬವ್ವ, ಸ್ವಾಮಿ ನಿಷ್ಠೆ, ಸಮಯ ಸ್ಫೂರ್ತಿ ಮತ್ತು ತ್ಯಾಗದ ತ್ರಿವೇಣಿ ಸಂಗಮ. ಚಿತ್ರದುರ್ಗದ ಕೋಟೆಯ ಮುತ್ತಿಗೆಗೆ ಯತ್ನಿಸಿದ ಹೈದರ್–ಅಲಿ ಕುತಂತ್ರವನ್ನು ವಿಫಲಗೊಳಿಸಿ ಕೋಟೆ ಮತ್ತು ಜನತೆಯನ್ನು ಅಪಾಯದಿಂದ ಪಾರು ಮಾಡಿದ ವೀರವನಿತೆ ಓಬವ್ವ ಎಂದು ಹೇಳಿದರು.

ಒನಕೆ ಓಬವ್ವ 18ನೇ ಶತಮಾನದ ಚಿತ್ರದುರ್ಗ ಕೋಟೆಯ ಪಾಳೆಗಾರನಾಗಿದ್ದ ಮದಕರಿ ನಾಯಕನ ಕೋಟೆಯ ಕಾವಲುಗಾರ ಮದ್ದ ಹನುಮಪ್ಪನ ಹೆಂಡತಿ. ಇವರನ್ನು ಕನ್ನಡ ನಾಡಿನ ವೀರ ವನಿತೆಯರಾದ ಕಿತ್ತೂರು ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕ ಸಾಲಿನಲ್ಲಿ ಪರಿಗಣಿಸಲಾಗುತ್ತದೆ ಎಂದು ಹೇಳಿದರು.

ವಿಶೇಷ ಉಪನ್ಯಾಸಕರಾಗಿ ಮಾತನಾಡಿದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ನಿವೃತ್ತ ಪ್ರಾಂಶುಪಾಲರಾದ ಸರ್ವೋದಯ ಎಸ್.ಎಸ್‌ಅವರು, ಗುಡಕೋಟೆ ಪಾಳೆಗಾರರಲ್ಲಿ ಕಹಳೆಯವರಾಗಿ ಸೇವೆ ಸಲ್ಲಿಸುತ್ತಿದ್ದ ಚಿನ್ನಪ್ಪ, ಚಿನ್ನಮ್ಮ ದಂಪತಿಯ ಸುಪುತ್ರಿಯಾಗಿ ಬಳ್ಳಾರಿ ಜಿಲ್ಲೆಯ ಕೊಡ್ಲಿಗಿ ತಾಲೂಕಿನ ಗುಡ್ಡೆ ಕೋಟೆಯಲ್ಲಿ ಜನಿಸಿದಳು. ಓಬವ್ವಗೆ ಕಂದೂರಪ್ಪ ಮತ್ತು ತಿಪ್ಪಣ್ಣ ಎಂಬ ಅಣ್ಣಂದಿರು ಕಂದೂರಪ್ಪ ನಿಡುಗಲ್ಲು ಸಂಸ್ಥಾನದ ದೊರೆಗಳಲ್ಲಿ ಕಾವಲಗಾರನಾಗಿ ಶತ್ರುಗಳನ್ನು ಏಕಾಂಗಿಯಾಗಿ ಎದುರಿಸಿ ವೀರಮರಣ ಹೊಂದಿದ್ದರು. ಇಂತಹ ಆದರ್ಶ ಕುಟುಂಬದಲ್ಲಿ ಬೆಳೆದವಳು ಒಬ್ಬವ್ವಳ ಪತಿ ಕಹಳೆ ಮದ್ದ ಹನುಮಪ್ಪ ಕಿಂಚಿತ್ತೂ ಲೋಪ ಮಾಡಿದವನಲ್ಲ. ಅವನ ವ್ಯಕ್ತಿತ್ವಕ್ಕೆ ಸರಿಯೇ ಸಮಾನವಾದ ಸಂಗಾತಿ ಓಬವ್ವ, ಚಿತ್ರದುರ್ಗದ ರಾಜಾವೀರ ಮದಕರಿ ನಾಯಕರಲ್ಲಿ ಆಪ್ತ ಸೇವಕನಾಗಿ ಸೇವೆ ಸಲ್ಲಿಸುತ್ತಿದ್ದ ಮದ್ದ ಹನುಮಪ್ಪನ ಸತಿಯಾಗಿ ಬಾಳಿ ಬೆಳಗಿದ ಒಬ್ಬವ್ವ ಕೇವಲ ಓಬವ್ವ ಮಾತೆಯ ಸಾಹಸ ಕಾರ್ಯಕ್ಕೆ ಮದಕರಿ ನಾಯಕರು ಅಭಿನಂದಿಸಿ, ಆ ಸಾಹಸ ಕಾರ್ಯದ ನೆನಪಿಗೆ ಇನ್ನೊಂದು ಸುತ್ತು ಕೋಟೆ ಕಟ್ಟಿಸಿ ಅದರ ಬಾಗಿಲಿಗೆ "ಒನಕೆ ಕಿಂಡಿ ಬಾಗಿಲು" ಎಂದು ಹೆಸರಿಟ್ಟಿದ್ದು, ಒಬ್ಬವ್ವಳ ಅಪ್ರತಿಮ ಸೇವೆಯ ಪ್ರತೀಕವಾಗಿದೆ.

ಓಬವ್ವ ಮಾತೆಯ ಅಪೇಕ್ಷೆಯಂತೆ ಕುಲದೇವತೆಯಾಗಿಸಿ ಅಗಸನಕಲ್ಲು ಗ್ರಾಮವನ್ನು ಚಲವಾದಿ ಸಮುದಾಯಕ್ಕೆ ಜಹಾಗೀರಿಯಾಗಿ ನೀಡಿ, ಓಬವ್ವ ಮರಣ ಹೊಂದಿದಾಗ ದೊರೆಗಳೇ ಬಂದು ಸಂತಾಪ ಸೂಚಿಸಿ ರಾಜ ಮರ್ಯಾದೆಯೊಡನೆ ದುರ್ಗದ ಬೀದಿಗಳಲ್ಲಿ ಮೆರವಣಿಗೆ ಮಾಡಿಸಿ ತಣ್ಣೀರು ಚಿಲುಮೆಯ ಪೂರ್ವಕ್ಕೆ ಸಮಾಧಿ ಮಾಡಿಸಿದ್ದು, ಚಿತ್ರದುರ್ಗ ದೊರೆಗಳ ದಕ್ಷತೆಗೆ, ಔದಾರ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಓಬವ್ವ ತ್ರಿಕಾಲಗಳಿಗೂ ಪ್ರಭಾವಿಸುವಂತಹ ವ್ಯಕ್ತಿತ್ವ ಸಂಪಾದಿಸಿದ್ದರಿಂದಲೇ ಸಾಂಸ್ಕೃತಿಕ ನಾಯಕಿ ಎಂಬ ಅಭಿದಾನಕ್ಕೆ ಅರ್ಹಳಾಗಿದ್ದಾಳೆ. ಆಕೆಯ ಸೌಜನ್ಯ, ವಿವೇಕ ವಿವೇಚನೆ, ವಿಚಾರಗಳು ಸದಾಸ್ಮರಣೀಯ. ಚಿತ್ರದುರ್ಗ ನಗರದ ಹೊಳಲ್ಕೆರ್ ರಸ್ತೆಯ ಅಗಸನ ಕಲ್ಲು ಚಲವಾದಿಗಳು ವಾಸಿಸುತ್ತಿರುವ ಸ್ಥಳದಲ್ಲಿ ಓಬವ್ವ ಮಾತೆಯ ದೇವಾಲಯ ನಿರ್ಮಾಣವಾಗಿದೆ. ನಿತ್ಯ ಪೂಜೆ ನಡೆಯುತ್ತಿದೆ ಎಂದೂ ಹೇಳಿದರು.

ಈ ಸಂದರ್ಭದಲ್ಲಿ ಯಾದಗಿರಿ ತಹಸೀಲ್ದಾರ್ ಸುರೇಶ್ ಅಂಕಲಗಿ ವೀರ ವನಿತೆ ಒನಕೆ ಒಬ್ಬವ ಸಮಿತಿ ಜಿಲ್ಲಾಧ್ಯಕ್ಷರಾದ ಗೋಪಾಲ್ ತಳಿಗೇರಿ. ಶಿವಕುಮಾರ್ ಬಂದಳ್ಳಿ. ಚಂದ್ರಕಾಂತ್ ಮುನಿಯಪ್ಪ ಶಿವಕುಮಾರ್. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರಾ ದೇವಿ ಮಠಪತಿ ಅನೇಕ ಮುಖಂಡರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶ್ರೀ ಗಾನಯೋಗಿ ಪ.ಪಂಚಾಕ್ಷರಿ ಸಂಗೀತ ಪಾಠ ಶಾಲೆ ಯಾದಗಿರಿ ಶ್ರೀಮತಿ ರೇಣುಕ ಎಂ.ಶಳಗಿ, ತಬಲ ಮಹಾಂತೇಶ್ ಶಹಪುರಕರ, ವಿನಯ್ ಕುಮಾರ್ ಶಳಗಿ ಶ್ರೇಯಾ ಪಿ.ಬಿ ಸುಭಧಾ ಪುರಣಕರ, ಚಿನ್ಮಯ್ ರೆಡ್ಡಿ ಮೈತ್ರಿ ಬಡಿಗೇರ್,ಪ್ರಾರ್ಥಿಸಿ,ಸಂಗೀತ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು.

# ಒಂದು ಭಾಷೆ ನಾಶವಾದರೆ ಆ ಪರಂಪರೆಯೇ ನಾಶವಾದಂತೆ: ಕೌಲಗಿ




**ಉದಯರಶ್ಮಿ ದಿನಪತ್ರಿಕೆ**

## ವಿಜಯಪುರದ ಎಕ್ಸಲಂಟ್ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ಸಂಭ್ರಮದ ರಾಜ್ಯೋತ್ಸವ

ವಿಜಯಪುರ: ಭಾಷೆಗಳು ಕೇವಲ ಮಾತನಾಡುವ ಮಾಧ್ಯಮ ಮಾತ್ರವಲ್ಲ, ಬದಲಿಗೆ ನಮ್ಮ ಸಂಸ್ಕಾರ ಹಾಗೂ ಸಂಸ್ಕೃತಿಯ ಪ್ರತಿಬಿಂಬವಾಗಿರುತ್ತವೆ. ವಿಶ್ವದ ಲಿಪಿಗಳ ರಾಣಿಯಾಗಿ ಗುರುತಿಸಿಕೊಂಡಿರುವ ಕನ್ನಡ ಭಾಷೆ ಕೇವಲ ಭಾಷೆ ಮಾತ್ರವಾಗಿರದೆ ಅದು ನಮ್ಮ ಜೀವನಾಡಿಯಾಗಿದೆ. ಹೀಗಾಗಿ ಅದನ್ನು ಉಳಿಸಿ ಬೆಳೆಸುವ ಗುರುತರವಾದ ಜವಾಬ್ದಾರಿ ನಮ್ಮ ಮೇಲಿದೆ. ಕಾರಣ ಒಂದು ಭಾಷೆ ನಾಶವಾದರೆ ಒಂದು ಪರಂಪರೆಯೇ ನಾಶವಾಗುತ್ತದೆ. ಆದ ಕಾರಣ ಅದನ್ನು ಉಳಿಸುವ ಕೆಲಸ ನಮ್ಮಿಂದ ನಡೆಯಬೇಕು ಎಂದು ಎಕ್ಸಲಂಟ್ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಸವರಾಜ ಕೌಲಗಿ ಹೇಳಿದರು.

ನಗರದ ಎಕ್ಸಲಂಟ್ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು; ರಾಜ್ಯೋತ್ಸವದ ಕೇವಲ ಒಂದು ದಿನಕ್ಕೆ ಮಾತ್ರ ಸೀಮಿತವಾಗಿರದೆ ಕನ್ನಡದ ಉತ್ಸವ ನಿತ್ಯೋತ್ಸವವಾಗಬೇಕು ಎಂದರು.

ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಶರಣಗೌಡ ಪಾಟೀಲ ಮಾತನಾಡಿ, ಕನ್ನಡಿಗರ ಗುಣದಷ್ಟೆ ಕನ್ನಡ ಸುಂದರವಾಗಿದ್ದು ಒಂದೊಂದು ಭಾಗಕ್ಕೆ ಕಾಲಿಟ್ಟರೆ ಒಂದೊಂದು ರೀತಿಯಲ್ಲಿ ಕನ್ನಡದ ಝೇಂಕಾರವಾಗುತ್ತದೆ. ಇದು ಕರ್ನಾಟಕದಲ್ಲಿ ಮಾತ್ರ ನೋಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿದರು.

ಇನ್ನೋರ್ವ ಕನ್ನಡ ಉಪನ್ಯಾಸಕ ರಮೇಶ ಬಾಗೇವಾಡಿ, ಹಲವಾರು ಪ್ರಕಾರದ ಜನಪದ ಗೀತೆಗಳನ್ನು ಹಾಡಿ ಭಾಷೆಯ ಸೊಗಡನ್ನು ಪರಿಚಯಿಸಿದರು.

ಗಾಯಕ ಪಾಂಡುರಂಗ ಕುಲಕರ್ಣಿ ಕನ್ನಡ ಪರ ಗೀತೆಗಳನ್ನು ಹಾಡಿ ವಿದ್ಯಾರ್ಥಿಗಳನ್ನು ರಂಜಿಸಿದರು.

ವಿದ್ಯಾರ್ಥಿನಿ ಆಕಾಂಕ್ಷಾ ಪ್ರಾರ್ಥಿಸಿದರು. ಕಾಲೇಜಿನ ಪ್ರಾಚಾರ್ಯ ಶ್ರೀಕಾಂತ ಕೆ.ಎಸ್ ಸ್ವಾಗತಿಸಿದರು. ಉಪನ್ಯಾಸಕ ಮುಸ್ತಾಕ ಮಲಘಾಣ ನಿರೂಪಿಸಿದರು.

ಎಲ್ಲ ಬೋಧಕ ಬೋಧಕೇತರ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ಮಾರಕಾಸ್ತ್ರಗಳಿಂದ ಕೊಚ್ಚಿ ರೌಡಿ ಶೀಟರ್ ಹತ್ಯೆ



ಕಲಬುರಗಿ: ಮಾರಕಾಸ್ತ್ರಗಳಿಂದ ಕೊಚ್ಚಿ ರೌಡಿ ಶೀಟರ್ ವೊಬ್ಬನನ್ನು ಬರ್ಬರವಾಗಿ ಹತ್ಯೆಗೈದ ಘಟನೆ ತಾಲೂಕಿನ ಪಟ್ಟಣ ಗ್ರಾಮದಲ್ಲಿ ನಡೆದಿದೆ.

ಸೋಮು ತಾಳಿಕೋಟಿ (40) ಬರ್ಬರವಾಗಿ ಕೊಲೆಯಾದ ರೌಡಿ ಶೀಟರ್. ಪಟ್ಟಣ ಗ್ರಾಮದಲ್ಲಿ ಕೊಲೆ ಮಾಡಿ ಆಳಂದ ರಸ್ತೆಯ ರೈಲ್ವೆ ಹಳಿ ಬಳಿ ಶವ ಎಸೆದು ದುಷ್ಕರ್ಮಿಗಳು ಪರಾರಿಯಾಗಿದ್ದಾರೆ.

ಕೆಲ ತಿಂಗಳ ಹಿಂದೆ ಪಟ್ಟಣ ಗ್ರಾಮದ ದಾಬಾ ಮಾಲೀಕರ ಜೊತೆ ಈತ ಜಗಳ ಮಾಡಿಕೊಂಡಿದ್ದಲ್ಲದೆ, ಸೋಮು ಮತ್ತು ಆತನ ಸಂಗಡಿಗರು ದಾಬಾ ಮಾಲೀಕನ ಮೇಲೆ ಹಲ್ಲೆ ನಡೆಸಿದ್ದರು ಎನ್ನಲಾಗಿದೆ. ಬಹುಶಃ ಹಳೆ ದ್ವೇಷದ ಕಾರಣದಿಂದಲೇ ಈ ಕೊಲೆ ನಡೆದಿರಬಹುದು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಸಬ್ ಅರ್ಬನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಹಂತಕರ ಭೇಟೆಗಾಗಿ ಪೊಲೀಸರು ಜಾಲ ಬೀಸಿದ್ದಾರೆ.

# ಜನ–ಮನ ಸೂರೆಗೊಂಡ 'ಕರಿಮಾಯಿ' ನಾಟಕ

**ಉದ್ಘಾಟಿಸಿ ದಿನಪತ್ರಿಕೆ**



ವಿಜಯಪುರ: ನಗರದ ಕಂದಗಲ್ಲ ಹಣಮಂತ್ರಾಯ ರಂಗ ಮಂದಿರದಲ್ಲಿ ಶರಣು ಸಬರದರವರ ಜಿಲ್ಲಾ ಯುವಪರಿಷತ್, ಪ್ರೀತಿ ಮೋಹನ್ ಕಟ್ಟಿಮನಿಯವರ ಎಸ್.ಪಿ.ಎಂಟರ್ ಪ್ರೈಸಸ್, ಪ್ರಕಾಶ ಮಠ ಅವರ ಇವೆಂಟ್ರಾ ಇಂಟ್ರನ್ಯಾಷನಲ್ ರವರ ಆಯೋಜನೆಯಲ್ಲಿ, ಸ್ಪಂದನಾ ಬೆಂಗಳೂರ ರವರ ತಂಡದಿಂದ ಖ್ಯಾತ ರಂಗ ನಿರ್ದೇಶಕಿ ಬಿ.ಜಯಶ್ರೀ, ಚಿತ್ರ ನಟ ರಮೇಶ ಪಂಡಿತ್ ಮತ್ತು ಸಹಕಾಲಾವಿದರು ಅಭಿನಯಿಸಿದ ಚಂದ್ರಶೇಖರ ಕಂಬಾರವರ ಕಾದಂಬರಿ ಆಧಾರಿತ ನಾಟಕ 'ಕರಿಮಾಯಿ' ನಾಟಕವನ್ನುಬಿ.ಜಯಶ್ರೀಹಾಗೂನಾಟಕದಪ್ರಾಯೋಜಕರು ಉದ್ಘಾಟಿಸಿ, ಈ ತರಹದ ನಾಟಕಗಳನ್ನು ನಗರ ಪ್ರದೇಶದಲ್ಲಿ ಆಯೋಜಿಸುವುದರಿಂದ ನಮ್ಮ ಪರಂಪರೆಯನ್ನು ಯುವಪೀಳಿಗೆಗೆ ಪರಿಚಯಿಸುವದರೊಂದಿಗೆ ರಂಗ ಕಲೆಯನ್ನು ಜೀವಂತವಾಗಿರಿಸಿದ ನಮ್ಮಂತಹ ಕಲಾವಿದರಿಗೆ ಪ್ರೋತ್ಸಾಹವಾಗುತ್ತದೆಂದು ಹೇಳಿದರು.

ಈ ನಾಟಕ ಆಯೋಜನೆಯ ಪ್ರೇರಣಾಶಕ್ತಿಯಾದ ನಗರದ ಡಿ.ಎಸ್.ಪಿ ಬಸವರಾಜ ಯಲಿಗಾರ ಅವರು ಮಾತನಾಡಿ, ಈ ನಾಡಿನಲ್ಲಿ ನೈಜತೆಯ ಸಂಸ್ಕಾರ ಉಳಿಯಬೇಕಾದರೆ ಇಂತಹ ನಾಟಕಗಳ ಪ್ರದರ್ಶನ ಅವಶ್ಯವಿದೆ. ಇಂತಹ ಕಾರ್ಯಕ್ಕೆ ನಮ್ಮ ಬೆಂಬಲ ಸದಾ ಇರುತ್ತದೆಂದು ಹೇಳಿದರಲ್ಲದೆ,

ಮನೋಜ್ಞವಾಗಿ ನಾಟಕವನ್ನು ಅಭಿನಯಿಸುವ ಮೂಲಕ ಮೌಢ್ಯ ಮತ್ತು ರಾಜಕೀಯ ಎರಡೂ ಬಹು ಅಪಾಯಕಾರಿಯಾದುದು ಎಂಬ ಸಂದೇಶ ಇದರಲ್ಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಯಾರನಾಳದ ಸಂಗನಬಸವ ಶ್ರೀಗಳು, ವೇದ ಅಕಾಡಮಿಯ ಡಾ.ಶಿವಾನಂದ ಕೆಲೂರ, ರೀಶ್ವಿಕ್ ಅಪ್ಟಿಕಲ್ಸನ ಮಾಲೀಕರು, ರೂಡಗಿ ಡೆವಲಪರ್ಸ್ ಮಾಲೀಕರು, ಹುಂಡೈ ಶೋರೂಮ್ ಮಾಲೀಕರು, ಸಹ ಪ್ರಯೋಜಕರಾದ ಮಧುರ ತೈಲ ಕಂಬಾಗಿ, ಹೋಟಲ್ ರಾಮಕೃಷ್ಣ ಪ್ಯಾಲೇಸ್, ಶಿವಾನಂದ ಮಗ್ಗದ, ದೇವರಾಜ್ ಶಾಸ್ತ್ರೀ, ಸಂಗಮೇಶ ಹೊಸಮನಿ, ಶಾಂತು ದೊಡ್ಡಮನಿ, ನಿರೂಪಕಿ ಸಾನಿಯಾ, ಬಿ.ಎಸ್.ಬಿರಾದಾರ, ಸೀಮಾ ಟಕ್ಕಣ್ಣವರ, ವಿಶ್ವನಾಥ ಬಿರಾದಾರ್, ಡಾ.ಸುನಿಲ್ ರಾಠೋಡ, ನಗರದ ಸಾಹಿತಿಗಳು, ಸಮಸ್ತ ರಂಗಕಲೆಯ ಆಸಕ್ತರು ಉಪಸ್ಥಿತರಿದ್ದು ಹರ್ಷ ವ್ಯಕ್ತಪಡಿಸಿದರು.

# ಶರಣರ ಜೀವನ ಪರಿಚಯ–ಕಥಾ ಲೇಖನ ಕಾರ್ಯಾಗಾರ ಸಂಪನ್ನ

**ಉದಯರಶ್ಮಿ ದಿನಪತ್ರಿಕೆ**



ಬಸವಕಲ್ಯಾಣ: ಅನುಭವ ಮಂಟಪ ಅಭಿವೃದ್ಧಿ ಪ್ರಾಧಿಕಾರ ಮತ್ತು ಬಸವ ತಿಳುವಳಿಕೆ ಮತ್ತು ಸಂಶೋಧನ ಕೇಂದ್ರ – ಪುಣೆ ಇದರ ಅಡಿಯಲ್ಲಿ ಬಸವಕಲ್ಯಾಣದಲ್ಲಿ ನಡೆದ ಎರಡು ದಿನದ ಕಾರ್ಯಾಗಾರದಲ್ಲಿ 12 ನೆಯ ಶತಮಾನದ ಶರಣರ ಜೀವನ ಪರಿಚಯ ಕುರಿತು ಕಥಾ ಲೇಖನ ಹಾಗೂ ಶರಣರ ವಚನಗಳ ಪರಿಷ್ಕೃತ ಆವೃತ್ತಿಗಳನ್ನು ಒಳಗೊಂಡ ಸಾಹಿತ್ಯವನ್ನು ಸಿದ್ಧಪಡಿಸಲು ಸಂಪನ್ಮೂಲ ವ್ಯಕ್ತಿಗಳನ್ನು ಹುಡುಕಿ ಆ ಮೂಲಕ ಕಾರ್ಯನಿರ್ವಹಿಸುವ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನಡೆಯಿತು.

ಡಾ.ಬಾಬಾಸಾಹೇಬ ಗಡ್ಡೆ ಅವರು, ಹೊಸ ಅನುಭವ ಮಂಟಪದ ವೀಕ್ಷಣೆ ಮತ್ತು ವಿವರಣೆಯನ್ನು, ಶರಣರ ತತ್ವಸಿದ್ಧಾಂತದೊಂದಿಗೆ ಮತ್ತು ಹೊಸ ಕಾರ್ಯ ತಂತ್ರಜ್ಞತೆಯೊಂದಿಗೆ ಹೇಗೆ ರೂಪುಗೊಳ್ಳುತ್ತಿದೆ ಕುರಿತು ಹಾಗೂ ಶರಣರ ಸಂವಾದ ಮತ್ತು ಸಂಭಾಷಣೆ ಮತ್ತು ವಚನಕಾರರ ಚರಿತ್ರೆ ಪ್ರಾತ್ಯಕ್ಷಿಕೆಯ ಕುರಿತು ವಿವರಿಸಿದರು.

ಪುಣೆಯ ಬಸವ ತಿಳುವಳಿಕೆ ಮತ್ತು ಅಧ್ಯಯನ ಕೇಂದ್ರದ ಮುಖ್ಯಸ್ಥ ಡಾ.ಶಶಿಕಾಂತ ಪಟ್ಟಣ ಅವರು, ಶರಣರ ಚರಿತ್ರೆ ರಚನೆ ಹಾಗೂ ವಚನಗಳ ಶುದ್ಧೀಕರಣ ಮತ್ತು ಪ್ರಕ್ಷಿಪ್ತ ನಿವಾರಣೆಯ ಅಗತ್ಯತೆ ಕುರಿತು ಮಾತನಾಡಿದರು.

ಶರಣೆ ಗೌರಮ್ಮ ನಾಶಿ, ಪ್ರೊ.ಶಾರದಮ್ಮ ಪಾಟೀಲ್, ಡಾ.ದಾನಮ್ಮ ಝಳಕಿ, ಡಾ.ವೀಣಾ ಎಲಿಗಾರ, ಡಾ.ಶರಣಮ್ಮ ಗೊರೆಬಾಳ, ಡಾ.ಸುಧಾ ಕೌಜಗೇರಿ, ಡಾ.ಕಸ್ತೂರಿ ದಳವಾಯಿ, ಡಾ.ಜಯಶ್ರೀ ಹಸಬಿ, ಡಾ. ಗೀತಾ ಡಿಗ್ಗೆ, ಡಾ.ಸಂಗಮೇಶ ಕಲಹಾಳ ಹೀಗೆ ಪ್ರತಿಯೊಬ್ಬರೂ ತಮ್ಮ ಎರಡು ದಿನಗಳ ಕಾರ್ಯಾಗಾರದ ಬಗೆಗೆ ಸಕಾರಾತ್ಮಕವಾಗಿ ಸ್ಪಂದಿಸಿದರು.

ಡಾ.ಜಯಶ್ರೀ ಪಟ್ಟಣ ಶರಣು ಸಮರ್ಪಣೆ ಮಾಡಿದರು. ಕಾರ್ಯಕ್ರಮವನ್ನು ಜವಾಬ್ದಾರಿಯುತವಾಗಿ, ಯಶಸ್ವಿಯಾಗಿ ಡಾ.ಶಶಿಕಾಂತ ಪಟ್ಟಣ ನಡೆಸಿಕೊಟ್ಟರು.

### ಶಿಬಿರಾರ್ಥಿಗಳೊಂದಿಗೆ ಡಾ. ಪಟ್ಟಣ ಸಂವಾದ

**ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ಐವತ್ತು ಜನರ ತಂಡವು ಡಾ.ಶಶಿಕಾಂತ ಪಟ್ಟಣ ಅವರು ಒದಗಿಸಿದ ಶರಣರ ಪುಸ್ತಕಗಳ ಸಹಾಯದಿಂದ ಯಾವುದೇ ಪವಾಡಗಳನ್ನು ಸೇರಿಸದೆ, ಕಾಲ್ಪನಿಕ ಸನ್ನಿವೇಶಗಳನ್ನು ಬರೆಯದೆ ನಿಜವಾದ ಅರ್ಥದಲ್ಲಿ ವಚನಗಳ ಸಾರಾಂಶ ಏನಿದೆ, ಈಗಿನ ಸಮಯದಲ್ಲಿ ಅದರ ಪ್ರಸ್ತುತತೆ ಎಷ್ಟಿದೆ ಎನ್ನುವುದರ ಬಗೆಗೆ ಲೇಖನಗಳನ್ನು ಬರೆಯಿತು.**

**ಬಳಿಕ ಶಿಬಿರಾರ್ಥಿಗಳೊಂದಿಗೆ ಡಾ.ಪಟ್ಟಣ ಅವರು ಆಯಾ ಶರಣರ ಕುರಿತು ಸಂವಾದ ನಡೆಸಿದರು.**

# ಅಡೆತಡೆಗಳನ್ನು ದಾಟಿ–ಗೆಲುವಿನ ನಗೆ ಬೀರಿ

**ಉದಯರಶ್ಮಿ ದಿನಪತ್ರಿಕೆ**

## 'ಜಯ್ ನುಡಿ' (ವ್ಯಕ್ತಿತ್ವ ವಿಕಸನ ಲೇಖನ ಮಾಲೆ)

ಜಗತ್ತಿಗೆ ಸದಾ ನೆನಪಿರುವಂತಹ ಗೆಲುವು ರಾತ್ರೋರಾತ್ರಿ ದೊರೆಯುವಂಥದ್ದಲ್ಲ. ಅದು ಸಮಯವನ್ನು ಬೇಡುತ್ತದೆ. ಜತೆಗೆ ಅದಕ್ಕೆ ನಮ್ಮ ಕಠಿಣ ಪರಿಶ್ರಮ, ತುಡಿತ ಮತ್ತು ಏಕಾಗ್ರತೆಯ ಅವಶ್ಯಕತೆಯೂ ಇದೆ. ಎಲ್ಲದಕ್ಕಿಂತ ಹೆಚ್ಚಾಗಿ ತ್ಯಾಗವನ್ನು ಬೇಡುತ್ತದೆ. ಹಿಂದಿನ ತಲೆಮಾರುಗಳಿಗೆ ಹೋಲಿಸಿದರೆ ಇಂದಿನ ಯುವ ಜನತೆ ಅತಿ ಹೆಚ್ಚು ಪ್ರತಿಭಾವಂತರಿದ್ದಾರೆ. ಅಲ್ಲದೇ ದೊಡ್ಡ ದೊಡ್ಡ ಹೊಂಗನಸುಗಳನ್ನು ಕಾಣುತ್ತಾರೆ. ಅದರಲ್ಲಿ ಕೆಲ ಯುವಕರಂತೂ ಕನಸು ನನಸಾಗಿಸಲು ಸಾಕಷ್ಟು ಹಾತೊರೆಯುತ್ತಾರೆ. ಅದರೊಂದಿಗೆ ಹಗಲು ರಾತ್ರಿಯೆನ್ನದೇ ಶ್ರಮವಹಿಸುತ್ತಾರೆ. ಹೀಗಿದ್ದಾಗ್ಯೂ ಸಹ ಗೆಲುವು ಅವರಿಗೆ ಮರೀಚಿಕೆ ಆಗುತ್ತದೆ ಮೈಲಿಗಟ್ಟಲೇ ಇನ್ನೂ ಸಾಗುವುದಿದೆ ಏನೋ ಅನಿಸುತ್ತದೆ. ಗೆಲುವು ನನ್ನ ಪಾಲಿಗಿಲ್ಲವೆಂದು ಯುವ ಜನತೆ ಬೇಸರಪಟ್ಟುಕೊಂಡು ಪ್ರಯತ್ನವನ್ನು ನಿಲ್ಲಿಸಿಬಿಡುತ್ತಾರೆ. ಯಾಕೆ ಹೀಗೆ ಆಗುತ್ತದೆಂಬ ಪ್ರಶ್ನೆಗೆ ಉತ್ತರ ಹುಡುಕಹೊರಟಾಗ ಅವರು ಮಾಡುವ ತಪ್ಪುಗಳು, ಎದುರಾಗುವ ಅಡೆತಡೆಗಳು ನೆದರಿಗೆ ಬೀಳುತ್ತವೆ.




### ಯಶಸ್ಸು ನಿಧಾನ

'ಯಶಸ್ಸು ನಿಧಾನ ಪ್ರಕ್ರಿಯೆ, ಆದರೆ ಯಶಸ್ಸಿನ ಹಾದಿಯನ್ನು ತೊರೆಯುವುದು ಅದನ್ನು ವೇಗಗೊಳಿಸುವುದಿಲ್ಲ.'ಈ ಉಲ್ಲೇಖವು ಶಾಶ್ವತವಾದ ಯಶಸ್ಸನ್ನು ಸಾಧಿಸಲು ಬಿಟ್ಟುಕೊಡುವ ಬದಲು ನಿರಂತರತೆ ಮತ್ತು ಕಠಿಣ ಪರಿಶ್ರಮದ ಅಗತ್ಯವಿದೆ ಎಂಬ ಸವಾಲಿನ ಸತ್ಯವನ್ನು ಒಳಗೊಂಡಿದೆ. ತಾಳ್ಮೆ ಕಳೆದುಕೊಳ್ಳುವುದು, ಅಕಾಲಿಕವಾಗಿ ಪ್ರಯತ್ನಗಳನ್ನು ತ್ಯಜಿಸುವುದು ಅಥ–'ವಾ ದಿಕ್ಕುಗಳನ್ನು ಬದಲಾಯಿಸುವುದು ಸುಲಭ. ಗೆಲುವು ಇನ್ನೂ ದೂರವಿದೆ ಎಂದು ತೋರುತ್ತಿರುವಾಗ ನಾವು ಗಮನವನ್ನು ಹೇಗೆ ಕಾಪಾಡಿಕೊಳ್ಳಬೇಕೆಂಬುದು ಮುಖ್ಯ. ಯಶಸಿನ ದಾರಿಯಲ್ಲಿ ದೃಢಚಿತ್ತರಾಗಿ ಮುಂದುವರೆಯಲು ಸಹಾಯ ಮಾಡುವ ಕೆಲವು ಸಲಹೆಗಳು ಇಲ್ಲಿವೆ.

### ತಪ್ಪುಗಳು

ನಮಗೆ ತಪ್ಪುಗಳು ಅಂದ ತಕ್ಷಣ ನಕಾರಾತ್ಮಕ ಭಾವ ಉಂಟಾಗುತ್ತದೆ. ವಾಸ್ತವದಲ್ಲಿ ಯಶಸ್ಸಿನ ಹಾದಿಯಲ್ಲಿ ಅವು ಮೆಟ್ಟಿಲುಗಳಿದ್ದಂತೆ ಆ ಸೋಪಾನಗಳನ್ನು ಬಳಿಸಿಯೇ ನಾವು ಗೆಲುವಿನ ಬೆಟ್ಟವನ್ನು ಹತ್ತಬೇಕು. ಆದರೆ ತಪ್ಪುಗಳನ್ನು ತಪ್ಪಾಗಿ ತಿಳಿಯುತ್ತೇವೆ. 'ತಪ್ಪುಗಳು ಹೊಸ ಪಾಠವನ್ನು ಕಲಿಸುವ ಅವಕಾಶಗಳು.' ಅವುಗಳನ್ನು ಅವಕಾಶಗಳೆಂದು ತಿಳಿಯದೇ ಅಡೆತಡೆಗಳೆಂದು ತಿಳಿಯುತ್ತೇವೆ. ಸಾಮಾನ್ಯವಾಗಿ ತಪ್ಪುಗಳನ್ನು ಅನನುಕೂಲ ಮತ್ತು ಸ್ವೀಕಾರಾರ್ಹವಲ್ಲವೆಂದು ಅರ್ಥೈಸುತ್ತೇವೆ. ಪ್ರತಿ ತಪ್ಪಿನಿಂದ ವಿಶೇಷವಾಗಿ ಹೊಸದನ್ನು ಕಲಿಯಬಹುದು. ಅದರಲ್ಲಿ ಅಮೂಲ್ಯವಾದ ಪಾಠವೊಂದು ಅಡಗಿದೆ ಎಂಬುದನ್ನು ಅರಿತುಕೊಳ್ಳದೇ ಹೋಗುತ್ತೇವೆ. ಸರಳವಾಗಿ ಹೇಳಬೇಕೆಂದರೆ ನಾವೆಲ್ಲ ಉತ್ತಮವಾಗುವ ದಾರಿಯೆಂದರೆ ಅದು ತಪ್ಪುಗಳಿಂದ ಕಲಿಯುವುದು. ತಪ್ಪುಗಳಿಂದ ಕಲಿಯುತ್ತ ಹೋದವರೆ ಯಶಸ್ಸಿನ ಶಿಖರದ ಮೇಲೆ ವಿಜಯದ ಪತಾಕೆಯನ್ನು ಹಾರಿಸುತ್ತಾರೆ. ತಪ್ಪುಗಳಿಲ್ಲದೇ ಗೆಲುವು ಸಾಧಿಸಲು ಅಸಾಧ್ಯ. ತಪ್ಪುಗಳು ನಮ್ಮನ್ನು ಸರಿಗೊಳಿಸುತ್ತವೆ. ಗೆಲುವಿನ ದಾರಿಯಲ್ಲಿ ಸರಿಯಾಗಿ ನಡೆಯುವಂತೆ ಮಾಡುತ್ತವೆ.. ಎಡವಿದಾಗ ಮತ್ತೆ ಎದ್ದು ನಡೆಯಲು ಸಹಾಯ ಮಾಡುತ್ತವೆ. ಆದ್ದರಿಂದ ತಪ್ಪುಗಳ ಬಗ್ಗೆ ತಪ್ಪು ಅಭಿಪ್ರಾಯಗಳನ್ನು ಬಿಡಬೇಕು. ತಪ್ಪು ತಪ್ಪಲ್ಲವೆಂದು ಮನಗಾಣಬೇಕು. ಅವುಗಳಿಂದ ಪಾಠ ಕಲಿತು ಯಶೋಶಿಖರದತ್ತ ಮುನ್ನುಗ್ಗಬೇಕು.



### ದೀರ್ಘಾವಧಿಯ ಬದ್ಧತೆ

ಅರ್ಥಪೂರ್ಣ ಸಾಧನೆಗಳಿಗೆ ಸಮಯ ಮತ್ತು ಶ್ರಮ ಬೇಕಾಗುತ್ತದೆ. ಎಂಬುದನ್ನು ಒಪ್ಪಿಕೊಳ್ಳದಿರುವುದು ದೊಡ್ಡ ತಪ್ಪು. ಇಂದಿನ ದಾವಂತ ಜೀವನದ ಸಂಸ್ಕೃತಿಯಲ್ಲಿ ರಾತ್ರೋರಾತ್ರಿ ಗೆಲುವು ಸಿಗಬೇಕೆಂದು ಬಯಸುತ್ತೇವೆ. ಈ ಸಂಸ್ಕೃತಿಯು ಯಶಸ್ವಿನ ಆಕರ್ಷಣೆಯು ಪಾಂಡಿತ್ಯವು ದೀರ್ಘಾವಧಿಯ ಬದ್ಧತೆ ಎಂಬುದನ್ನು ಮರೆಯುವಂತೆ ಮಾಡುತ್ತಿದೆ. ಯಾವುದೇ ಕ್ಷೇತ್ರದಲ್ಲಿ ಪರಿಣಿತರಾಗಲು ಸುಮಾರು 10,000 ಗಂಟೆಗಳ ಅಭ್ಯಾಸವನ್ನು ತೆಗೆದುಕೊಳ್ಳುತ್ತದೆ ಎಂದು ನರವಿಜ್ಞಾನಿ ಡೇವಿನಲ್ ಲೆವಿಟನ್ ಸೂಚಿಸುತ್ತಾರೆ. 'ಯಶಸ್ಸು ಕೇವಲ ಒಂದು ಗಮ್ಯಸ್ಥಾನವಲ್ಲ, ಅದೊಂದು ಪಯಣ.'ಎಂಬುದನ್ನು ಮರೆತಿರುವುದು ಒಂದು ದೊಡ್ಡ ತಪ್ಪು. ಗೆಲುವಿನ ನಿರೀಕ್ಷೆಯಲ್ಲಿರುವವರು ಕೇವಲ ನಿರೀಕ್ಷಿಸಿದರೆ ಅದು ಲಭಿಸುವುದಿಲ್ಲ. ಅದಕ್ಕಾಗಿ ದೀರ್ಘಾವಧಿ ಬದ್ಧತೆಯ ನಿರಂತರ ಪ್ರಯತ್ನವನ್ನು ಮುಂದುವರೆಸಲೇಬೇಕು.

### ಅನುಕರಣೆ

ಹೊಳೆಯುವ ವಸ್ತುಗಳೆಲ್ಲ ಬಂಗಾರವಲ್ಲ. ಅನ್ನೋ ಬಂಗಾರದಂಥ ಮಾತನ್ನು ನಾವೆಲ್ಲ ಕೇಳಿಯೇ ಇರುತ್ತೇವೆ. ಹಾಗೆಯೇ ಬೇಗನೆ ಯಶಸ್ವಿ ವ್ಯಕ್ತಿಗಳಾಗಬೇಕೆಂದು ಕಂಗೊಳಿಸುವ, ದಾರಿ ತಪ್ಪಿಸುವ ಅಡ್ಡಮಾರ್ಗವನ್ನು ಹಿಡಿಯುವುದು ತಪ್ಪು.. 'ಇಂಗ್ಲೀಷ್'ನ ಮಾತೊಂದು ಹೀಗೆ ಹೇಳುತ್ತದೆ. 'ಇಟ್ ಈಸ್ ಬೆಟರ್ ಟು ಫೇಲ್ ಇನ್ ಓರಿಜಿನ್ಯಾಲಿಟಿ ದ್ಯಾನ್ ಟು ಸಕ್ಸೀಡ್ ಇನ್ ಇಮಿಟೇಷನ್. ಅಂದರೆ ಅವರಿವರನ್ನು ಅನುಕರಿಸಿ ಗೆಲ್ಲುವುದಕ್ಕಿಂತ ನಮ್ಮತನದಲ್ಲಿ ಸೋಲುವುದು ಒಳ್ಳೆಯದು. ಯಾರೋ ಏನೋ ಮಾಡಿ ಗೆದ್ದಿದ್ದಾರೆ ಅಂದರೆ ಅವರನ್ನೇ ನಕಲು ಮಾಡುವುದು ತಪ್ಪು. ನಮ್ಮಲ್ಲಿರುವ ಪ್ರತಿಭೆ, ಶಕ್ತಿ, ಸಾಮರ್ಥ್ಯಗಳನ್ನು ಗುರುತಿಸಿ ಆ ನಿಟ್ಟಿನಲ್ಲಿ ಪ್ರಯತ್ನಿಸುವುದು ಉತ್ತಮ ಫಲಿತಾಂಶವನ್ನು ನೀಡುತ್ತದೆ. ಅನುಕರಣೆ ನಮ್ಮನ್ನು ಹಾಳು ಮಾಡುತ್ತದೆ. ಆದ್ದರಿಂದ ಚಿಂತಿಸಿ ನಿರ್ವಹಿಸಬೇಕು.

### ತ್ಯಜಿಸುವುದು

ಭವಿಷ್ಯವನ್ನು ನಿರೂಪಿಸುವ ಮಹತ್ವದ ಸಂಗತಿಗಳಲ್ಲಿ ನಿರಾಸಕ್ತಿಯನ್ನು ತೋರುವುದು ತುಂಬಾ ಅಪಾಯಕಾರಿ ಸಂಗತಿ. ಬಯಸಿದ ಬದುಕನ್ನು ಕಟ್ಟಿಕೊಳ್ಳಲು ಹಗಲು ಇರುಳು ಗುರಿಯತ್ತ ಪಯಣಿಸುವುದನ್ನೇ ರೂಡಿಸಿಕೊಳ್ಳಬೇಕು. 'ಹತ್ತು ಕಡೆ ಗುಂಡಿ ತೋಡಿದರೆ ನೀರು ಲಭಿಸುವುದಿಲ್ಲ. ಒಂದೇ ಕಡೆ ಗುಂಡಿ ತೋಡಿದರೆ ನೀರು ಸಿಗುವ ಸಾಧ್ಯತೆ ಹೆಚ್ಚು.' ಕೆಲ ದಿನಗಳು ಇಲ್ಲವೇ ಕೆಲ ತಿಂಗಳು ಒಂದು ಗುರಿಯ ಬೆನ್ನು ಹತ್ತುವುದು, ನಂತರ ಇದು ಫಲ ನೀಡದು ಅಂತ ತ್ಯಜಿಸುವುದು ಸಹ ಗೆಲುವಿನ ಹಾದಿಯಲ್ಲಿ ಮಾಡುವ ತಪ್ಪೇ ಸರಿ.'ವಿನ್ನರಸ್ ನೆವರ್ ಕ್ವಿಟ್. ಕ್ವಿಟ್ಸ್ ನೆವರ್ ವಿನ್' ಈ ಇಂಗ್ಲೀಷ್ ನುಡಿ ಗೆಲ್ಲುವವರು ಪ್ರಯತ್ನವನ್ನು ಬಿಡುವುದಿಲ್ಲ. ಪ್ರಯತ್ನ ತ್ಯಜಿಸುವವರು ಗೆಲ್ಲಲಾರರು ಎಂಬುದನ್ನು ಸಮರ್ಥಿಸುತ್ತದೆ.

### ಸ್ಪಷ್ಟತೆ


ಇನ್ನೊಂದು ಸಂಗತಿಯೆಂದರೆ ಒಂದು ಗುರಿಯತ್ತ ಪ್ರಯತ್ನಿಸುತ್ತ ಸಾಗುವುದು ಜಯ ಇನ್ನೇನು ಲಭಿಸುವುದು ಎನ್ನುವ ಸಂದರ್ಭದಲ್ಲಿ ತಾಳ್ಮೆ ಕಳೆದುಕೊಂಡು ಪ್ರಯತ್ನವನ್ನು ತ್ಯಜಿಸುವುದು. ಇದು ನಿಜಕ್ಕೂ ದೊಡ್ಡ ಮೂರ್ಖತನ. ಗಿಡ ಇನ್ನೇನು ಹಣ್ಣು ಕೊಡುವ ಸಮಯ ಬಂದಿದೆ ಅನ್ನೋ ಹೊತ್ತಿನಲ್ಲಿ ಬೇರು ಸಮೇತ ಗಿಡವನ್ನು ಕಿತ್ತು ಹಾಕಿದಂತೆ ಆಗುತ್ತದೆ. ಅಂತೆಯೇ ಆ ಮೂರ್ಖತನ ಗೆಲುವನ್ನು ದೂರ ಮಾಡುತ್ತದೆ. ಬಯಸಿದ ಬದುಕನ್ನು ಪಡೆಯುವುದು ಕಠಿಣವೇನೂ ಅಲ್ಲ ಆದರೆ ಗುರಿ ಸ್ಪಷ್ಟವಾಗಿರಬೇಕು. ಅಂದರೆ ಒಂದೇ ದಾರಿಯಲ್ಲಿ ನಿಲ್ಲದ ನಡಿಗೆ ಇರಬೇಕು. ಪಡೆಯುವ ತನಕ ಬಿಡದ ಛಲವಿರಬೇಕು. ನಿಮಗೇನು ಸಾಧಿಸುವುದಿದೆ ಎಂಬುದರ ಬಗ್ಗೆ ನಿಮಗೇ ಸ್ಪಷ್ಟತೆ ಇಲ್ಲದಿದ್ದರೆ ಗೆಲುವು ಮರೀಚಿಕೆಯಾಗುವುದು. ಆದ್ದರಿಂದ ಒಂದು ಗುರಿಯನ್ನು ನಿರ್ಧರಿಸಿ ಅದರತ್ತ ದೃಡಚಿತ್ತದಿಂದ ನಡೆಯಬೇಕು. ಒಂದೇ ಒಂದು ಗುರಿಯನ್ನು ಬೆನ್ನು ಹತ್ತುವುದು ತಡವಾದರೂ ಸರಿ ಅದರಲ್ಲಿ ಗೆಲುವು ಖಂಡಿತ.

### ಸಣ್ಣ ಗೆಲುವು

ದೊಡ್ಡ ಗೆಲುವು ಒಮ್ಮೆಲೇ ಬರುವುದಿಲ್ಲ. ಸಣ್ಣ ಸಣ್ಣ ಗೆಲುವುಗಳು ದೊಡ್ಡ ಗೆಲುವಿನ ಮುನ್ಸೂಚನೆಗಳು. ದೊಡ್ಡ ಗುಡ್ಡದ ಮೇಲಿರುವ ಮಂದಿರ ತಲುಪಲು ಸಣ್ಣ ಸಣ್ಣ ಮೆಟ್ಟಿಲುಗಳು ಹೇಗೆ ಸಹಾಯ ಮಾಡುತ್ತವೆಯೋ ಹಾಗೆಯೇ ಚಿಕ್ಕ ಗುರಿಗಳು ದೊಡ್ಡ ಗುರಿ ಸಾಧಿಸಲು ಸಹಕಾರಿ. ದೊಡ್ಡ ಗುರಿಯನ್ನು ಚಿಕ್ಕ ಚಿಕ್ಕ ಇಲ್ಲವೇ ಸೂಕ್ಷ್ಮ ಗುರಿಗಳನ್ನಾಗಿ ವಿಭಜಿಸುವುದರಿಂದ ದೊಡ್ಡ ಗೆಲುವಿನತ್ತ ಪಯಣಿಸಲು ಪ್ರೇರಣೆ ನೀಡುತ್ತದೆ. ಪ್ರೇರಣೆಯನ್ನು ಕಾಪಾಡಿಕೊಳ್ಳಲು ಸಣ್ಣ ಗೆಲುವುಗಳು ನಿರ್ಣಾಯಕಗಳೆಂದು ವಿವರಿಸುತ್ತಾರೆ ಹಾರ್ವರ್ಡ್ ಬ್ಯುಸಿನೆಸ್ ಸ್ಕೂಲ್‌ನ ಪ್ರಾಧ್ಯಾಪಕರಾದ ತೆರೆಸಾ ಅಮಾಬೈಲ್.

### ಭಾವನಾತ್ಮಕ ಕಾರಣ

'ಸ್ಟಾರ್ಟ್ ವಿಥ್ ವೈ" ಅಂದರೆ ನೀವು ಇದನ್ನೇಕೆ ಸಾಧಿಸಬೇಕು ಎನ್ನುವುದಕ್ಕೆ ಭಾವನಾತ್ಮಕ ಕಾರಣವನ್ನು ಕೊಟ್ಟುಕೊಂಡು ಆರಂಭಿಸಬೇಕು. ಈ ಕಾರಣ ಹಿನ್ನೆಡೆಗಳನ್ನು ನಿರ್ವಹಿಸಲು ಸಹಕಾರಿ. 'ಏಕೆ' ಅನ್ನು ಗ್ರಹಿಸುವುದು ಅನಿವಾರ್ಯ. ಈ 'ಏಕೆ' ನಿಮ್ಮ ಆಂತರಿಕ ದಿಕ್ಸೂಚಿಯಾಗಿ ಕಾರ್ಯ ನಿರ್ವಹಿಸುತ್ತದೆ. ಆದರೆ ಗುರಿ ಸಾಧನೆಗೆ ನಾವು ಬಲವಾದ ಕಾರಣವನ್ನು ಕೊಟ್ಟುಕೊಳ್ಳುವುದೇ ಇಲ್ಲ. ಹೀಗಾಗಿ ಪಯಣವನ್ನು ಅರ್ಧಕ್ಕೆ ನಿಲ್ಲಿಸುತ್ತೇವೆ.



### ಕೊನೆ ಹನಿ

ಸ್ಟ್ಯಾನ್‌ಫೋರ್ಡ್ ಮನಸಾಸ್ತ್ರಜ್ಞ ಕರೋಲ್ ಡ್ವೆಕ್ 'ಬೆಳವಣಿಗೆ ಮನಸ್ಥಿತಿ'ಯ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತಾರೆ. ಕೌಶಲ್ಯಗಳು ಸ್ಥಿರವಾಗಿಲ್ಲ, ಆದರೆ ಅವುಗಳನ್ನು ಕಲಿಕೆಯಿಂದ ಅಭಿವೃದ್ಧಿಪಡಿಸಬಹುದು.' ನೀವು ಇನ್ನೂ ಎಷ್ಟು ದೂರ ಹೋಗಬೇಕು ಎನ್ನುವುದಕ್ಕಿಂತ ನೀವು ಎಷ್ಟು ದೂರ ಬಂದಿದ್ದೀರಿ.' ಎಂಬುದರ ಮೇಲೆ ಕೇಂದ್ರೀಕರಿಸಿ. ಇದರಿಂದ ಪ್ರಗತಿ ಸಾಧ್ಯ. ಪ್ರಗತಿಯ ಮೇಲೆ ಕೇಂದ್ರೀಕರಿಸಿ ಹೊರತು ಪರಿಪೂರ್ಣತೆಯ ಮೇಲಲ್ಲ. ಪ್ರತಿದಿನದ ಕೊನೆಯಲ್ಲಿ ಆತ್ಮಾವಲೋಕನ ಮಾಡಿಕೊಳ್ಳಿ. ಸಾಧನೆಗಳನ್ನು ಪರೀಕ್ಷಿಸಿ ಬದಲಾವಣೆಯನ್ನು ಪರಿಗಣಿಸಿ. ಗೆಲುವಿಗೆ ಯಾವುದೇ ಅಡ್ಡಮಾರ್ಗಗಳಿಲ್ಲ. ಅಂತೆಯೇ ಮಾಂತ್ರಿಕ ತಂತ್ರಗಳಿಲ್ಲ. ಮಿತಿಗಳನ್ನು ಸವಾಲಾಗಿಸಿಕೊಳ್ಳಿ, ಆಗ ಮಾತ್ರ ಅತ್ಯದ್ಭುತ ಗೆಲುವು ನಗೆ ಬೀರುತ್ತದೆ.



ಲೇಖನ
**ಜಯಶ್ರೀ.ಜೆ. ಅಬ್ಬಿಗೇರಿ**
ಇಂಗ್ಲೀಷ್ ಉಪನ್ಯಾಸಕರು,
ಬೆಳಗಾವಿ, ಮೊ:9449234142

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR